ಕಲ್ಯಾಣ ಕಿರಣ

"ದೇವನಾಗಬಹುದು ಬಸವಣ್ಣನಾಗಲು ಬಾರದು"

ನವೆಂಬರ್-2014

ರೂ-20/-



ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮೀಜಿಯವರ ಪಟ್ಟಾಧಿಕಾರ







ಚನ್ನಬಸವೇಶ - ಮಂಟಪದ ಮಾಣಿಕ್ಯ

ಶ್ರೀ ಚನ್ನ ಬಸವೇಶ ಭಕ್ತರನು ಪೊರೆವೀಶ
ಜಯ ಭಜಕ ಜನ ಬಂಧು ಕಾರುಣ್ಯ ಸಿಂಧು ॥ ಪ ॥

ಪರಮ ಗುರು ಬಸವನ ಕರಕಮಲ ಜನಿತನೆ
ಶರಣ ಹೃತ್ಸರಸಿಯ ಶ್ರೀ ಪರಮಹಂಸೆಯೆ ॥ ಅ.ಪ ॥

ಕಾರ್ತಿಕ ಪ್ರತಿಪದೆಯ ದೀವಳಿಗೆಯಂದು
ಮಾತೆಯ ಗರ್ಭದಿಂ ನೀ ಬಂದೆಯಂದು ।
ಅವ್ವ ನಾಗಾಂಬಿಕೆಯ ಅಕ್ಕರೆಯ ಚಿಣ್ಣನೆ
ಅಯ್ಯ ಶಿವದೇವನ ಮಮತೆಯ ತನುಜನೆ ॥ 1 ॥

ಷಟಸ್ಥಲದ ಚೌಕಟ್ಟ ವಚನ ಶಾಸ್ತ್ರಕೆ ಇತ್ತೆ
ಸಟೆಯ ಮಾಯೆಯ ಗೆಲಿದು ವಿರಾಗಿ ಎನಿಸಿದೆ ।
ಉನ್ಮನಿಯ ಉಯ್ಯಾಲೆಯಲ್ಲಿ ತೂಗಿ ನಲಿದು
ಅನುಭವ ಮಂಟಪದ ಹೊಂಗಳಶವಾದೆ ॥ 2 ॥

ವಚನ ವಾಙ್ಮಯಕ್ಕಂದು ಸಂಕಷ್ಟ ಎರಗಿರಲು
ಕಾಷಾಯ ಧರಿಸಿಯೂ ಖಡ್ಗವನು ನೀ ಹಿಡಿದೆ ।
ಮುನ್ನಡೆಸಿ ಶರಣರ ವಾಙ್ಮಯವ ರಕ್ಷಿಸಿದೆ
ಚನ್ನ ಹುಣ್ಣಿಮೆಯಂದು ಉಳವಿಯಲಿ ಬಯಲಾದೆ ॥ 3 ॥

ನೀ ಪಾದವಿಟ್ಟುದು ಸುಕ್ಷೇತ್ರ ತಾನಾಯ್ತು
ನೀ ನುಡಿದ ಮಾತೆಲ್ಲ ದಿವ್ಯ ಶಾಸ್ತ್ರವದಾಯ್ತು
ಶರಣ ಧರ್ಮದ ಉಳಿವು ನಿನ್ನಿಂದಲೇ ಆಯ್ತು
ಸಚ್ಚಿದಾನಂದನ ಮೆಚ್ಚುಗೆಯ ಮಗನಾದೆ ॥ 4 ॥

– ಮಾತಾಜಿ

ಮರ್ತ್ಯಲೋಕದ ಭಕ್ತರ ಮನವ ಬೆಳಗಲೆಂದು ಇಳಿತಂದನಯ್ಯಾ ಶಿವನು;
ಕತ್ತಲೆಯ ಪಾಳೆಯವ ರವಿ ಹೊಕ್ಕಂತಾಯಿತ್ತಯ್ಯಾ
ಚಿತ್ತದ ಪ್ರಕೃತಿಯ ಹಿಂಗಿಸಿ,
ಮುಕ್ತಿ ಪಥವ ತೋರಿದನೆಲ್ಲ ಅಸಂಖ್ಯಾತ ಗಣಂಗಳಿಗೆ
ತನುವೆಲ್ಲ ಸ್ವಯಲಿಂಗ, ಮನವೆಲ್ಲ ಚರಲಿಂಗ
ಭಾವವೆಲ್ಲ ಮಹಾಘನದ ಬೆಳಗು
ಚನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣ ಸಮ್ಯಕ್ ಜ್ಞಾನಿ ಚನ್ನಬಸವಣ್ಣನ ಶ್ರೀ ಪಾದಕ್ಕೆ ಶರಣೆಂದು,
ಎನ್ನ ಭವಂ ನಾಸ್ತಿಯಾಯಿತ್ತಯ್ಯಾ ಪ್ರಭುವೆ.

- ಜಗನ್ಮಾತಾ ಅಕ್ಕಮಹಾದೇವಿ

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||

866666

ಸಂಪುಟ-45	ಬಸವ ಶಕೆ -881	ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-11	ನವೆಂಬರ್-2014	ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಶರಣ ವ್ರತ ಸ್ವೀಕಾರ

ಶರಣ ಬಂಧುಗಳೇ,

ಶರಣ ವ್ರತ ಸ್ವೀಕಾರ ಮಾಡಿ ಶರಣ ಮೇಳಕ್ಕೆ ಅನೇಕರು ಬರುವುದುಂಟು. 40 ದಿವಸಗಳ ಗುರುಸಾರಾಯ ಸಂಪದ್ ವ್ರತ, 30 ದಿನಗಳ ಲಿಂಗ ಸಾರಾಯ ಸಂಪದ್ ವ್ರತ, 20 ದಿವಸಗಳ ಜಂಗಮ ಸಾರಾಯ ಸಂಪದ್ ವ್ರತ, 10 ದಿವಸಗಳ ಪ್ರಸಾದ ಸಾರಾಯ ಸಂಪದ್ ವ್ರತ. ಇವುಗಳಲ್ಲಿ ಯಾವುದನ್ನಾದರೂ ಸ್ವೀಕರಿಸಿ ದಿ. 14-01-2015ರಂದು ವ್ರತವನ್ನು ಪೂರ್ಣ ಗೊಳಿಸಬೇಕು.

1. ಗುರು ಸಾರಾಯ ಸಂಪದ್ ವ್ರತ - ಡಿಸೆಂಬರ್ 2ರಂದು
2. ಲಿಂಗ ಸಾರಾಯ ಸಂಪದ್ ವ್ರತ - ಡಿಸೆಂಬರ್ 12ರಂದು
3. ಜಂಗಮ ಸಾರಾಯ ಸಂಪದ್ ವ್ರತ - ಡಿಸೆಂಬರ್ 22ರಂದು
4. ಪ್ರಸಾದ ಸಾರಾಯ ಸಂಪದ್ ವ್ರತ - ಜನವರಿ 1ರಂದು

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476, Send SMS to 9945806297

Email :- kalyanakirana1970@gmail.com

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||



866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ

ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ

ಇಪ್ಪತ್ತೆಂಟನೆಯ ಶರಣಮೇಳ

2015ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ(ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು 28ನೆಯ ಶರಣ ಮೇಳವು 2015ರ ಜನವರಿ 11, 12, 13, 14ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. ಐದು ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯ ವಿಧಿಯಾಗಿರುತ್ತದೆ. ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚು ಕಟ್ಟಾಗಿ ಮಾಡುತ್ತಿದೆ.ದಿ. 11 ಮತ್ತು 12 ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಾರು ಬೇಕಾದರೂ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಳ್ಳಬಹುದು.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ ದಿ.10ನೆಯ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 10,000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು :3000 ರೂ.
2. ಪೋಷಕರು : 8000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ: 1500 ರೂ.
3. ದಾನಿಗಳು: 5000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 500 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 10,000/20,000 ರೂಪಾಯಿಗಳ ಪುದುವಟ್ಟು (F.D)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of India, Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ. ಯನ್ನಾಗಲಿ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧ ಗಯೆ ಧರ್ಮ ಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ) ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೂಡಲ ಸಂಗಮ, ಬ್ಯಾಂಕ್ ಖಾತೆಗಳು

Sharana Mela Utsava Samithi, SB A/c 10818354899
Basava Dharma Peetha, SB A/c No. 10818354684
Basava Mahamane Charitable Trust SB A/c 32391821105.
State Bank of India ದ IFSC Code ಕೋಡ್ SBIN0007172

Sharana Mela Utsava Samithi, (Canara Bank, Bangalore) SB A/c 1145101024057 ಕಾಣಿಕೆ ಕಳಿಸುವವರು ನೇರವಾಗಿ ವರ್ಗಾಯಿಸಿದರೆ ಕಾರ್ಯಾಲಯಕ್ಕೆ ತಿಳಿಸಬೇಕು. 80ಜಿ ಇನ್‌ಕಮ್‌ಟ್ಯಾಕ್ಸ್ ರಿಯಾಯಿತಿ ಬೇಕೆನ್ನುವವರು ಕಾರ್ಯಾಲಯಕ್ಕೆ ಸಂಪರ್ಕಿಸಿ.

ಸಂಪರ್ಕಿಸುವ ವಿಳಾಸಗಳು

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂ : 080-22923736/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟ
ದೂ : 08351-268014/268007/268140

ಅಕ್ಕನ ಅಮರವಾಣಿ

– ಮಾತಾಜಿ

ಭಾಗ-10

176. ಜಂಗಮ ಸೇವೆಗೆ ವಿಘ್ನಬೇಡ

ಶಿವಂಗೆ ತಪ್ಪಿದ ಕಾಲ ಭಸ್ಮವಾದುದನರಿಯಾ?
ಶಿವಂಗೆ ತಪ್ಪಿದ ಕಾಮನುರಿದುದನರಿಯಾ?
ಶಿವಂಗೆ ತಪ್ಪಿದ ಬ್ರಹ್ಮನಶಿರ ಹೋದುದನರಿಯಾ?
ಚೆನ್ನಮಲ್ಲಿಕಾರ್ಜುನದೇವನ ದೇವರ ಪಾದಕ್ಕೆ ತಪ್ಪಿದಡೆ,
ಭವಘೋರನರಕವೆಂಬುದರಿಯಾ, ಮರುಳೆ

ಶಿವನನ್ನ ಎದುರು ಹಾಕಿಕೊಂಡ ಕಾಲಾ(ಭಸ್ಮಾ)ಸುರ ಭಸ್ಮವಾಗಿ ಹೋದನು. ಶಿವನ ಮೇಲೆ ಹೂಬಾಣ ಬಿಡಲು ಹೋದ ಕಾಮ ಸುಟ್ಟು ಹೋದ. ದಕ್ಷಯಾಗದಲ್ಲಿ ಶಿವನನ್ನು ನಿಂದಿಸಿದ ಬ್ರಹ್ಮ ತನ್ನ ಶಿರವನ್ನು ಕಳೆದುಕೊಂಡ. ಹಾಗೆ ಚನ್ನಮಲ್ಲಿಕಾರ್ಜುನ ದೇವರ ಪಾದಕ್ಕೆ ತಪ್ಪಿದರೆ ನಿನಗೆ ಭವಘೋರ ನರಕ ಎಂಬುದನ್ನು ಅರಿ.

177. ಭಕ್ತ ದೇಹಿಕ ದೇವ

ಶಿವಭಕ್ತರ ರೋಮನೊಂದಡೆ, ಶಿವನು ನೋವ ನೋಡಾ.
ಶಿವಭಕ್ತರು ಪರಿಣಾಮಿಸಿದಡೆ, ಶಿವನು ಪರಿಣಾಮಿಸುವ ನೋಡಾ.
'ಭಕ್ತದೇಹಿಕ ದೇವ'ನೆಂದು ಶ್ರುತಿ ಹೊಗಳುವ ಕಾರಣ,
ಶಿವಭಕ್ತರ ಲೇಸು ಹೊಲ್ಲೆಹ ಶಿವನ ಮುಟ್ಟುವುದು ನೋಡಾ.
ತಾಯಿನೊಂದಡೆ ಒಡಲ ಶಿಶು ನೋವ ತೆರನಂತೆ,
ಭಕ್ತರು ನೊಂದಡೆ ತಾ ನೋವ ನೋಡಾ
ಚೆನ್ನಮಲ್ಲಿಕಾರ್ಜುನದೇವರ ದೇವಾ

ಶಿವಭಕ್ತರ ಕೂದಲ ಎಳೆ ನೊಂದರೆ ಶಿವನೇ ನೋಯುವನು. ಅವರು ಸಂತೋಷಿಸಿದರೆ ಶಿವನೂ ಹರ್ಷಿಸುವನು. ಪರಮಾತ್ಮನು ದೇಹದಲ್ಲಿ ವಾಸಿಸುವನು ಎಂದು ಧರ್ಮಶಾಸ್ತ್ರಗಳು ಹೇಳುತ್ತವೆ. ಭಕ್ತರ ಸುಖ-ದುಃಖ, ಒಳಿತು ಕೆಡುಕು ಶಿವನನ್ನು ಮುಟ್ಟುವುದು. ಗರ್ಭಿಣಿ ತಾಯಿಗೆ ನೋವಾದರೆ ಒಡಲಲ್ಲಿರುವ ಮಗುವಿಗೆ ನೋವಾಗುವುದು. ಅದೇ ರೀತಿ ಭಕ್ತರು ನೊಂದಡೆ ಶಿವನು ತಾನೇ ನೋಯುವನು.

178. ಶರಣರ ದರ್ಶನ ಅಮೃತ ಸಮಾನ

ಎನ್ನನಿರಿದಡೆ ಸೈರಿಸುವೆ, ಎನ್ನ ಕೊರೆದಡೆ ಸೈರಿಸುವೆ,
ಎನ್ನ ಕಡಿದು ಹರಹಿದಡೆ ಮನಕ್ಕೆ ತಾರೆನು.
ಚೆನ್ನಮಲ್ಲಿಕಾರ್ಜುನದೇವರ ದೇವಯ್ಯಾ
ನಿಮ್ಮ ಶರಣರನೊಡನೆನ್ನ ಕಣ್ಣ ಮುಂದೆ ಕಂಡು
ಮೊಗೆದುಂಡಮೃತದಂತೆ ಆದೆನಯ್ಯಾ

ದೇವಾ, ನನ್ನನ್ನು ಇರಿದಡೆ ಸೈರಿಸಿಕೊಳ್ಳುವೆ; ಕೊರೆದೊಡೆ ಸೈರಿಸಿಕೊಳ್ಳುವೆ, ನನ್ನನ್ನು ಕಡಿದು ತುಂಡು ಮಾಡಿ ಹರಡಿದರೆ ನಾನು ಬೇಸರ ಪಡುವುದಿಲ್ಲ. ಶರಣರು ಬಂದು ಕಣ್ಣ ಮುಂದೆ ನಿಂತರೆ ಅಮೃತವನ್ನು ಸವಿದಂತೆ ನನಗೆ ಆಗುವುದು.

179. ಶರಣರು ಪರಿಶುದ್ಧಾತ್ಮರು

ಅಂಗವಿಕಾರದ ಸಂಗವ ಮರೆದು,
ಲಿಂಗವನೊಡಗೂಡುತ್ತಿಪ್ಪವರ ತೋರಾ ಎನಗೆ.
ಕಾಮವಿಕಾರದ ಕತ್ತಲೆಯಳಿದು,
ಭಕ್ತಿಪ್ರಾಣವಾಗಿಪ್ಪವರ ತೋರಾ ಎನಗೆ.
ತ್ರಿಕರಣ ಶುದ್ಧವಾಗಿ ನಿಮ್ಮ ನೆರೆ ನಂಬಿದ
ಸದ್ಭಕ್ತರ ತೋರಾ ಎನಗೆ ಚನ್ನಮಲ್ಲಿಕಾರ್ಜುನದೇವರ ದೇವಾ

"ಶರೀರದ ಗುಣಗಳನ್ನು, ವಿಕಾರವನ್ನು ತೊರೆದು ಲಿಂಗದೇವನನ್ನು ಮನದಲ್ಲಿ ಒಡಗೂಡುತ್ತಿರುವವರನ್ನು ನನಗೆ ತೋರು. ಕಾಮ ವಿಕಾರದ ಕತ್ತಲೆಯನ್ನು ಕಳೆದುಕೊಂಡು ಭಕ್ತಿಯನ್ನು ಪ್ರಾಣವಾಗಿ ಮಾಡಿಕೊಂಡಿರುವವರನ್ನು ನನಗೆ ತೋರು. ತನು ವಚನ ಮನ ಎಂಬ ಮೂರು ಕರಣಗಳನ್ನು ಶುದ್ಧ ಮಾಡಿಕೊಂಡು ನಿನ್ನನ್ನು ದೃಢವಾಗಿ ನಂಬಿದಂತಹ ಸದ್ಭಕ್ತರನ್ನು ಎನಗೆ ತೋರಯ್ಯ ದೇವಾ."

180. ಶರಣರ ನಿಲವ ಲೋಕದ ಮಾನವರು ಬಲ್ಲರೆ?

ಗಗನದ ಗುಂಪ ಚಂದ್ರಮ ಬಲ್ಲುದಲ್ಲದೆ,
ಕಡೆಯಲ್ಲಿದ್ದಾಡುವ ಹದ್ದು ಬಲ್ಲುದೆ ಅಯ್ಯಾ?
ನದಿಯ ಗುಂಪ ತಾವರೆ ಬಲ್ಲುದಲ್ಲದೆ,
ಕಡೆಯಲ್ಲಿದ್ದ ಹೊನ್ನಾವರಿಕೆ ಬಲ್ಲುದೆ ಅಯ್ಯಾ?
ಪುಷ್ಪದ ಪರಿಮಳವ ತುಂಬಿ ಬಲ್ಲುದಲ್ಲದೆ,
ಕಡೆಯಲ್ಲಿದ್ದಾಡುವ ನೊರಜು ಬಲ್ಲುದೆ ಅಯ್ಯಾ?
ಚೆನ್ನಮಲ್ಲಿಕಾರ್ಜುನದೇವರ ದೇವಯ್ಯಾ,
ನಿಮ್ಮ ಶರಣರ ನಿಲವ ನೀವೆ ಬಲ್ಲಿರಲ್ಲದೆ
ಈ ಕೋಣನ ಮೇಲಣ ಸೊಳ್ಳೆಗಳೆತ್ತ ಬಲ್ಲವಯ್ಯಾ?

ಆಕಾಶದ ವಿಸ್ತಾರ, ಸೌಂದರ್ಯವನ್ನು ಎತ್ತರದಲ್ಲಿ ಇರುವ ಚಂದ್ರಮ ಬಲ್ಲುದಲ್ಲದೆ ಕೆಳಗಡೆಯೇ ಹಾರಾಡುವ ಹದ್ದು ಬಲ್ಲುದೆ? ಅದೇ ರೀತಿ ನದಿಯ ಆಳವನ್ನು ಅದರೊಳಗೆ ಬೆಳೆಯುವ ತಾವರೆಯ ದಂಟು ಬಲ್ಲುದಲ್ಲದೆ ನದಿಯ ದಂಡೆಯ ಮೇಲೆ ಬೆಳೆಯುವ ಹೊನ್ನಾವರಿಕೆ ಎಂಬ ಹುಲ್ಲು ಬಲ್ಲುದೆ? ಹೂವಿನ ಪರಿಮಳ(ಮತ್ತು ಮಕರಂದವ)ವ ದುಂಬಿ ಬಲ್ಲುದಲ್ಲದೆ ಕಡೆಯಲ್ಲಿ ಕಸದ ಮೇಲೆ ಹೊರಳಾಡುವ ನೊರಜುಬಲ್ಲುದೆ? ಹಾಗೆ ಶರಣರ ವ್ಯಕ್ತಿತ್ವವನ್ನು ದೇವರು ಬಲ್ಲನಲ್ಲದೆ ಲೌಕಿಕ ಜಗತ್ತಿನಲ್ಲಿ ವಿಕಾರಗಳಲ್ಲಿ ಬಳಲುವ ಕೋಣನ ಮೈಮೇಲಣ ಸೊಳ್ಳೆಗಳಂತಹ ಹುಲು ಮಾನವರು ಎತ್ತಬಲ್ಲರು?

ಶರಣರ ವ್ಯಕ್ತಿತ್ವ, ಮನಸ್ಥಿತಿಯನ್ನು ಅರಿಯದ ಜನರು ಬಗೆ ಬಗೆಯ ನಿಂದೆಗಳನ್ನು ಮಾಡುವರು. ಅಂಥವರನ್ನು ಕುರಿತು ಅಕ್ಕನವರು ಹೀಗೆ ಹೇಳುವರು.

181. ದೇವರಿಗೆ ಮಾರು ಹೋದವಳು

ಊರ ಮುಂದೆ ಒಂದು ಹಾಲ ತೊರೆ ಇರಲು
ನೀರಡಿಸಿ ಬಂದೆನಲ್ಲಯ್ಯ ನಾನು.
ಬರುದೊರೆವೋದವಳನೆನ್ನನಪ್ಪದಿರಯ್ಯಾ
ಹೆರಿಗೆ ಕೂತವಳ ತೆಗೆದಪ್ಪುವನೆಗ್ಗ ನೋಡಾ!
ಈ ಸೂನೆಗಾರಂಗೆ ಕುರಿಯ ಮಾರುವರೆ?
ಮಾರಿದರೆಮ್ಮವರೆನ್ನ ನಿಮಗೆ.
ಎನ್ನತ್ತ ಮುಂದಾಗದಿರು, ಎನ್ನ ಮೇಲೆ ಕಾಲನಿಡದಿರು
ಚೆನ್ನಮಲ್ಲಿಕಾರ್ಜುನದೇವರ ದೇವಂಗೆ ಸಲೆ ಮಾರುವೋದವಳಾನು.

ಊರಿನ ಮುಂದೆ ಒಂದು ಹಾಲಿನ ಹಳ್ಳ ಹರಿಯುತ್ತಿರಲು ಅಲ್ಲಿ ಹಾಲು ಕುಡಿಯುವುದನ್ನು ಬಿಟ್ಟು ನೀರು ಕುಡಿಯಲು ಇಲ್ಲಿಗೆ (ಅರಮನೆಗೆ) ಬಂದಂತಾಗಿದೆ. ಮಾನಸಿಕವಾಗಿ ದಣಿದು ಹೋಗಿರುವ ನನ್ನನ್ನು ಅಪ್ಪದಿರಯ್ಯ. ಹೆರಿಗೆಯ ನೋವನ್ನು ಅನುಭವಿಸುತ್ತಲಿರುವವಳನ್ನು ಬಲವಂತವಾಗಿ ತೆಗೆದು ಅಪ್ಪುವವನು ಮೂರ್ಖ. ಕಟುಕನಿಗೆ ಯಾರಾದರೂ ಕುರಿಯನ್ನು ಮಾರುವರೆ? ಆದರೆ ನಮ್ಮವರು ಮಾರಿಬಿಟ್ಟರು. ನನ್ನ ಕಡೆಗೆ ಬರದಿರು. ನನ್ನ ಮೇಲೆ ಕಾಲನ್ನಿಟ್ಟು ತುಳಿಯದಿರು. ದೇವರಿಗೆ ಮಾರುಹೋದವಳು ನಾನು.

ಈ ವಚನದಿಂದ ಅಕ್ಕನವರು ಬಹಳಷ್ಟು ಹಿಂಸೆಗೆ ಕೌಶಿಕನಿಂದ ಒಳಗಾಗಿದ್ದಾರೆ; ಅವನು ಕಾಲಿನಿಂದ ತುಳಿಯಲು ಮುಂದಾದಾಗ ಬೇಡವೆಂದು ವಿನಂತಿಸಿಕೊಂಡಿದ್ದಾರೆ ಎಂಬುದು ತಿಳಿಯುತ್ತದೆ. "ನಮ್ಮವರು ಮಾರಿದರು" ಎಂಬ ನುಡಿಯಿಂದ ಅಕ್ಕನವರು ಬಂಧುಗಳು ಅರಮನೆಗೆ ಹೋಗಲು ಒತ್ತಾಯಿಸಿದ್ದಾರೆ ಎಂದು ತಿಳಿಯುತ್ತದೆ.

182. ಶರಣರಿಗೆ ಲೋಕಾಭಿಮಾನವಿಲ್ಲ

ಒಲುಮೆ ಒಚ್ಚತವಾದವರು ಕುಲಛಲವನರಸುವರೆ?
ಮರುಳುಗೊಂಡವರು ಲಜ್ಜೆನಾಚಿಕೆಯ ಬಲ್ಲರೆ?
ಚೆನ್ನಮಲ್ಲಿಕಾರ್ಜುನದೇವರದೇವಂಗೊಲಿದವರು
ಲೋಕಾಭಿಮಾನವ ಬಲ್ಲರೆ?

ಪ್ರೀತಿ ಉಂಟಾದವರು ಕುಲವನ್ನೂ ಹುಡುಕುವುದಿಲ್ಲ, ಛಲವನ್ನೂ ತಾಳುವುದಿಲ್ಲ. ಪರಸ್ಪರರಲ್ಲಿ ಪ್ರೀತಿ ಉಂಟಾದಾಗ ಅವರು ಕುಲಜಾತಿಗಳನ್ನು ಗಣಿಸುವುದಿಲ್ಲ. ಮತ್ತು ಛಲವನ್ನು, ಮುನಿಸನ್ನೂ ತಾಳುವುದಿಲ್ಲ. ಮರುಳುಗೊಂಡವರು ಅಂದರೆ ಹುಚ್ಚರಾದವರಿಗೆ ಲಜ್ಜೆ, ನಾಚಿಕೆ ಎಂಬುದಿರುವುದಿಲ್ಲ. ಮೈಮೇಲೆ ಬಟ್ಟೆ ಇರದೆ ಇರುವ ಪ್ರಜ್ಞೆ ಸಹ ಅವರಿಗೆ ಇರುವುದಿಲ್ಲ. ಪರಮಾತ್ಮನಿಗೆ ಒಲಿದವರು ಲೋಕಾಭಿಮಾನ ಹೊಂದಿರುವುದಿಲ್ಲ. ದೇವರನ್ನು ಕುರಿತು ಉತ್ಕಟ ಪ್ರೀತಿ ಅವರಲ್ಲಿ ಇರುವುದು. ದೇವನಿಗಾಗಿ ಅವರು ಹುಚ್ಚರಾಗಿರುವರು. ಹೀಗಾಗಿ ಅವರಿಗೆ ಲೋಕದ ಜನ ಏನು ಆಡಿಕೊಳ್ಳುತ್ತಾರೆ ಎಂಬ ಪ್ರಜ್ಞೆ ಇರುವುದಿಲ್ಲ.

183. ಬದುಕಿಯೂ ಪ್ರಯೋಜನವೇನು?

ದೇವ ದೇವಾ, ಶಿವಲಾಂಛನವನೇರಿಸಿಕೊಂಡು
ಮನೆಗೆ ಬಂದವರ ಕಡೆಗಣಿಸಿ ಎಂತು ನೋಡುತಿರ್ಪೆ?

ಅವರಿಗೆ ಸತ್ಕಾರಮಂ ಮಾಡಲಿಲ್ಲದಿರ್ದೊಡೆ
ಎನ್ನನೀ ಧರೆಯ ಮೇಲಿರಿಸುವ
ಕಾರಣವೇನು ಚೆನ್ನಮಲ್ಲಿಕಾರ್ಜುನದೇವರ ದೇವಾ

ಅನುಭವಗೋಷ್ಠಿ ನಡೆಸಲು ಜಂಗಮರು ಅರಮನೆಗೆ ಬಂದಿದ್ದಾರೆ. ಅವರನ್ನು ಸ್ವಾಗತಿಸಿ, ಗೌರವಿಸಲು ಕೌಶಿಕನು ಒಪ್ಪಿಗೆ ಕೊಡದೆ ನಿರ್ಬಂಧಿಸುತ್ತಿದ್ದಾನೆ. ಆಗ ಹೇಳಿರುವ ವಚನವಿದು.

"ದೇವ ದೇವಾ, ಲಾಂಛನಗಳನ್ನು ಧರಿಸಿಕೊಂಡು ಮನೆಗೆ ಬಂದವರನ್ನು ಕಡೆಗಣಿಸಿ ಹೇಗೆ ಇರುವುದು? ಅವರಿಗೆ ಸತ್ಕಾರವನ್ನು ಮಾಡಲಾಗದ ಮೇಲೆ ನನ್ನನ್ನು ಭೂಮಿಯ ಮೇಲೆ ಇರಿಸುವುದೇಕೆ ದೇವಾ?

184. ಉಡುಗೆಯ ಹಂಗಿಲ್ಲ

ಕೈಸಿರಿಯ ದಂಡವ ಕೊಳಬಹುದಲ್ಲದೆ
ಮೈಸಿರಿಯ ದಂಡವ ಕೊಳಲುಂಟೆ?
ಉಟ್ಟಂತಹ ಉಡಿಗೆ ತೊಡಿಗೆಯನೆಲ್ಲ ಸೆಳದುಕೊಳ್ಳಬಹುದಲ್ಲದೆ
ಮುಚ್ಚಿ ಮುಸುಕಿರ್ದ ನಿರ್ವಾಣವ ಸೆಳೆದುಕೊಳಬಹುದೆ?
ಚೆನ್ನಮಲ್ಲಿಕಾರ್ಜುನದೇವನ ದೇವರ ಬೆಳಗನುಟ್ಟು ಲಜ್ಜೆಗೆಟ್ಟವಳಿಗೆ
ಉಡುಗೆ ತೊಡುಗೆಗಳ ಹಂಗೇಕೊ ಮರುಳೆ?

ಕೈಯಿಂದ ಹಾಕಿದ ಉಡುಗೆ, ತೊಡುಗೆಗಳನ್ನು ಕಿತ್ತುಕೊಳ್ಳಬಹುದಲ್ಲದೆ ಶರೀರದ ಸೌಂದರ್ಯವನ್ನು ಕಿತ್ತುಕೊಳ್ಳಬಹುದೆ? ಉಟ್ಟಿರುವ ಉಡುಗೆ ತೊಡುಗೆಗಳನ್ನು ಸೆಳೆದುಕೊಳ್ಳಬಹುದಲ್ಲದೆ ದೇಹದೊಡನೆಯೇ ಇರುವ ನಿರ್ವಾಣವನ್ನು ಸೆಳೆದುಕೊಳ್ಳಬಹುದೆ? ಪರಮಾತ್ಮನ ಅನುಗ್ರಹದ ಬೆಳಗನ್ನುಟ್ಟು ಬಹಿರಂಗದ ಲಜ್ಜೆ ಕಳೆದುಕೊಂಡವಳಿಗೆ ಉಡುಗೆ ತೊಡುಗೆಗಳ ಹಂಗೇಕೋ ಮರುಳೆ.

ಅಕ್ಕನವರ ಜೀವನದ ಉದ್ವಿಗ್ನ ಗಳಿಗೆ ಇದು. ಜಂಗಮರನ್ನು ಸ್ವಾಗತಿಸಲು ಹೆಜ್ಜೆ ಇಟ್ಟ ಅಕ್ಕನವರ ಸೀರೆಯನ್ನು ಹಿಡಿದು ಕೌಶಿಕನು ಬಲವಾಗಿ ಎಳೆಯುತ್ತಾನೆ. ಆಗ ಸೀರೆಯು ಬಿಚ್ಚಿಕೊಳ್ಳುತ್ತದೆ.

185. ಸೀರೆ ಹೋದರೆ ಅಂಜುವೆನೆ?

ನಾಳದ ಮರೆಯ ನಾಚಿಕೆ,
ನೂಲಮರೆಯಲ್ಲಿ ಅಡಗಿತ್ತೆಂದು ಅಂಜುವರು ಅಳುಕುವರು.
ಮನಮೆಚ್ಚಿದಭಿಮಾನಕ್ಕೆ ಆವುದು ಮರೆ ಹೇಳಾ?
ಕಾಯಮಣ್ಣೆಂದು ಕಳೆದ ಬಳಿಕ,
ದೇಹದಭಿಮಾನ ಅಲ್ಲಿಯೆ ಹೋಯಿತ್ತು.
ಪ್ರಾಣ ಬಯಲೆಂದು ಕಳೆದ ಬಳಿಕ,
ಮನದ ಲಜ್ಜೆ ಅಲ್ಲಿಯೆ ಹೋಯಿತ್ತು.
ಚೆನ್ನಮಲ್ಲಿಕಾರ್ಜುನದೇವರ ದೇವನ ಕೂಡಿ ಲಜ್ಜೆಗೆಟ್ಟವಳ
ಉಡುಗೆಯ ಸೆಳೆದುಕೊಂಡಡೆ,
ಮುಚ್ಚಿದ ಸೀರೆ ಹೋದರೆ ಅಂಜುವರೆ ಮರುಳೆ?

"ಮೂತ್ರನಾಳವನ್ನು ನಾಚಿಕೆಯಿಂದ ಮುಚ್ಚಿಕೊಳ್ಳಲು ಬಟ್ಟೆ ತೊಡುವರು. ಆ ಬಟ್ಟೆ ಸರಿಯಲು ಅಂಜುವರು, ಅಳುಕುವರು. ಮನಸ್ಸುಗಳು ಮೆಚ್ಚಿದಾಗ ಅಲ್ಲಿ ಮುಚ್ಚುಮರೆಯಿಲ್ಲ. ಶರೀರ ಮಣ್ಣಿನಿಂದ ಆಗಿದೆ ಎಂದು ತಿಳಿದಾಗ ದೇಹದ ಅಭಿಮಾನ ನಾಶವಾಗುವುದು. ಪ್ರಾಣವು ಬಯಲು ಎಂದು ತಿಳಿದ ಬಳಿಕ ಮನಸ್ಸಿನ ಲಜ್ಜೆ ಮಾಯವಾಗುವುದು. ಪರಮಾತ್ಮನನ್ನು ಕೂಡಿ ಲಜ್ಜೆಗೆಟ್ಟವಳ ಉಡುಗೆಯ ಸೆಳೆದುಕೊಂಡರೆ, ಮುಚ್ಚಿದ ಸೀರೆ ಬಿಚ್ಚಿ ಹೋದರೆ ನಾನೇನು ಅಂಜುವವಳಲ್ಲ." ಎಂದು ಅಕ್ಕನವರು ದಿಗಂಬರದ ದಿವ್ಯಾಂಬರೆಯಾಗಿ ನಿಂತಾಗ ಕೌಶಿಕನು ಈ ಅನಿರೀಕ್ಷಿತ ಪ್ರಸಂಗದಿಂದ ದಿಗ್ಭ್ರಾಂತನಾಗಿ ನಿಲ್ಲುವನು. ಸೀರೆ ಹಿಡಿದಾಗ ಮರ್ಯಾದೆಗೆ ಅಂಜಿ ಅಕ್ಕನವರು ಮುಂದೆ ಹೋಗುವುದಿಲ್ಲ ಎಂಬುದು ಅವನ ಎಣಿಕೆಯಾಗಿತ್ತು. ಹಾಗಾಗದೆ ಅಕ್ಕನವರು ದಿಗಂಬರೆಯಾದರೂ ಧೈರ್ಯವಾಗಿ ನಿಂತಾಗ ಕೌಶಿಕನು ಪೆಚ್ಚಾಗಿ ನಿಲ್ಲುತ್ತಾನೆ.

186. ನಶ್ವರ ದೇಹ

ಅಮೇಧ್ಯದ ಮಡಿಕೆ, ಮೂತ್ರದ ಕುಡಿಕೆ,
ಎಲುವಿನ ತಡಿಕೆ, ಕೀವಿನ ಹಡಿಕೆ
ಸುಡಲೀ ದೇಹವ; ಒಡಲುವಿಡಿದು ಕೆಡದಿರು,
ಚೆನ್ನಮಲ್ಲಿಕಾರ್ಜುನದೇವರ ದೇವನನರಿ ಮರುಳೇ.

ಈ ಶರೀರವು ಅಮೇಧ್ಯ(ಮಲ)ದ ಮಡಿಕೆ, ಮೂತ್ರದ ಕುಡಿಕೆ, ಎಲುವಿನ ತಡಿಕೆ, ಕೀವಿನ ಹಡಿಕೆ. ಈ ದೇಹವನ್ನು ಸುಡಬೇಕು. ಇಂಥ ನಶ್ವರವಾದ ದೇಹವನ್ನು ನಂಬಿ ಹಾಳಾಗಬೇಡ. ಪರಮಾತ್ಮನನ್ನು ಅರಿ ಮೂರ್ಖ ಎಂದು ಹೇಳಿ ದಿಗಂಬರದ ದಿವ್ಯಾಂಬರೆಯಾಗಿ ಅಕ್ಕನವರು ಮುನ್ನಡೆಯುವರು.

187. ಮುಟ್ಟುವೆ ನಿಮ್ಮನ್ನು

ಕೈಯ ಸಂಕಲೆಯ ಕಳೆದೆಯಲ್ಲಾ!
ಕಾಲ ಸುತ್ತಿದ ಪಾಶವ ಹರಿದೆಯಲ್ಲ!
ಸುತ್ತಿ ಮುತ್ತಿರ್ದ ಬಲೆಯ ಕುಣಿಕೆಯಿಂದ ಹೊರವಡಿಸಿದೆಯಲ್ಲಾ!
ಚೆನ್ನಮಲ್ಲಿಕಾರ್ಜುನ ದೇವರ ದೇವಾ
ನೀನು ಕೊಟ್ಟವಧಿ ತುಂಬುವ ಮುನ್ನ ಮುಟ್ಟುವೆ ನಿಮ್ಮನು.

"ನನ್ನ ಕೈಯನ್ನು ಕಟ್ಟಿಹಾಕಿದ್ದ ಸಂಕೋಲೆ(ಸರಪಳಿ)ಯನ್ನು ಕಳೆದೆಯಲ್ಲ. ಕಾಲಿಗೆ ಬಿಗಿದಿದ್ದ ಹಗ್ಗವನ್ನು ಹರಿದೆಯಲ್ಲ. ನನ್ನನ್ನು ಸುತ್ತಿದ್ದ ಅರಮನೆಯ ಬಂಧನವನ್ನು ಬಿಡಿಸಿ, ಕುಣಿಕೆಯಿಂದ ಹೊರಗೆ ಬರುವಂತೆ ಮಾಡಿದೆಯಲ್ಲ. ದೇವಾ, ನೀನು ಕೊಟ್ಟ ಅವಧಿ ತುಂಬುವ ಮುನ್ನವೇ ನಾನು ನಿಮ್ಮನ್ನು ಮುಟ್ಟುತ್ತೇನೆ."ಎಂದು ವೀರಶಪಥವನ್ನು ಮಾಡಿ ಅಕ್ಕನವರು ಆವೇಶದಿಂದ ಮುನ್ನಡೆಯುತ್ತಾರೆ. (ಕೌಶಿಕ ದಿಗ್ಭ್ರಾಂತನಾಗಿ ನಿಲ್ಲುತ್ತಾನೆ. ಅರಮನೆಯ ಬಂಧನ ಕಳಚಿಕೊಂಡ ಅಕ್ಕ ಕಲ್ಯಾಣದತ್ತ ಸಾಗುತ್ತಾಳೆ.)

೪. ಕೌಶಿಕನ ಅರಮನೆಯಿಂದ ಕಲ್ಯಾಣದೆಡೆಗೆ ಪಯಣ

188. ಮುಚ್ಚಿ ಮರೆದಲುಂಟೆ?

ನಾಣಮರೆಯ ನೂಲು ಸಡಿಲಲು
ನಾಚುವರು ನೋಡಾ ಗಂಡು ಹೆಣ್ಣೆಂಬಜಾತಿಗಳು.
ಪ್ರಾಣದೊಡೆಯ ಜಗದೊಳಗೆ ಮುಳುಗಲು ತೆರಹಿಲ್ಲದಿರಲು
ದೇವರ ಮುಂದೆ ನಾಚಲೆಡೆಯುಂಟೆ?
ಚೆನ್ನಮಲ್ಲಿಕಾರ್ಜುನದೇವರ ದೇವಾ ಜಗವೆಲ್ಲ ನೋಡುತ್ತಿರಲು
ಮುಚ್ಚಿ ಮರೆಸುವ ಠಾವಾವುದು ಹೇಳಯ್ಯಾ?

ಅಕ್ಕನವರು ಉಡುತಡಿಯಿಂದ ಹೊರಟು ಮುನ್ನಡೆಯುತ್ತಿದ್ದಂತೆಯೇ ತಾಯಿ ತಂದೆ ಬಂಧು ಬಳಗ, ಗೆಳತಿಯರು ಎಲ್ಲರೂ ವಿಸ್ಮಿತರಾಗಿ ಬರುವರು. ಬಟ್ಟೆ ಹಾಕಿಕೊಳ್ಳಬೇಕೆಂದು, ಗೌಣೇಂದ್ರಿಯಗಳನ್ನು ಮುಚ್ಚಿಕೊಳ್ಳಬೇಕೆಂದು ಆಗ್ರಹಿಸುವರು. ಆಗ ಅಕ್ಕನವರು ಈ ಮಾತು ಹೇಳುವರು.

"ಜನನೇಂದ್ರಿಯದ ಮೇಲಿನ ಬಟ್ಟೆ ಸಡಲಿದಾಗ ಗಂಡು ಹೆಣ್ಣು ಜಾತಿಗಳು ನಾಚಿಕೊಳ್ಳುವರು. ಪ್ರಾಣದ ಒಡೆಯನಾದ ದೇವರು ಜಗತ್ತಿನಲ್ಲಿ ಮಾನವರು ಮರೆಮಾಚದಂತೆ ತುಂಬಿ ತುಳುಕುತ್ತಲಿರಲು ಅಂಥ ದೇವರ ಮುಂದೆ ನಾಚಲು ಸಾಧ್ಯವೆ? ಪರಮಾತ್ಮನು ಸರ್ವದ್ರಷ್ಟಾರನಾಗಿ ಎಲ್ಲವನ್ನು ನೋಡುತ್ತಿರಲು ಅವನಿಗೆ ಕಾಣದಂತೆ ಮುಚ್ಚಿಮರೆಸುವ ಸ್ಥಾನ ಯಾವುದು?

189. ಶರಣ ಸತಿಯ ಶೃಂಗಾರ

ಗುರುಪಾದತೀರ್ಥವೆ ಮಂಗಳ ಮಜ್ಜನವೆನಗೆ.
ವಿಭೂತಿಯೆ ಒಳಗುಂದದರಷಿಣವೆನಗೆ.
ದಿಗಂಬರವೆ ದಿವ್ಯಾಂಬರವೆನಗೆ.
ಶಿವಭಕ್ತರ ಪಾದರೇಣುವೆ ಅನುಲೇಪನವೆನಗೆ.
ರುದ್ರಾಕ್ಷಿಯೆ ಮೈದೊಡಿಗೆಯೆನಗೆ.
ಶರಣರ ಪಾದರಕ್ಷೆಯೆ ಶಿರದಲ್ಲಿ ತೊಂಡಿಲಬಾಸಿಂಗವೆನಗೆ.
ಚೆನ್ನ ಮಲ್ಲಿಕಾರ್ಜುನ ದೇವನ ದೇವರ ಮದುವಳಿಗೆಗೆ
ಬೇರೆ ಶೃಂಗಾರವೇಕೆ ಹೇಳಿರೆ ಅವ್ವಗಳಿರಾ!

"ಗುರುವಿನ ಪಾದತೀರ್ಥವೇ ಮಂಗಳ ದ್ರವ್ಯಗಳಿಂದ ಕೂಡಿದ ಮಜ್ಜನೋದಕ. ಮೈಬಣ್ಣದ ವೃದ್ಧಿಗೆ ಲೇಪಿಸಿಕೊಳ್ಳುವ ಅರಿಷಿಣದ ಸ್ಥಾನವನ್ನು ವಿಭೂತಿಯು ಆವರಿಸಿಕೊಳ್ಳುತ್ತದೆ. ದಿಗಂಬರವೇ ದಿವ್ಯಾಂಬರವಾಗಿದೆ. ಶಿವಭಕ್ತರ ಪಾದದ ಧೂಳಿಯು ನನಗೆ ಮೈಲೇಪನ, ರುದ್ರಾಕ್ಷಿಯೇ ಮೈದೊಡಿಗೆ, ಶರಣರ ಪಾದರಕ್ಷೆಯೇ ತಲೆಯಲ್ಲಿ ಮುಡಿಸುವ ಹೂವಿನ ಬಾಸಿಂಗ. ನಾನು ದೇವರ ವಧು. ನನಗೆ ಬೇರೆ ಶೃಂಗಾರವೇಕೆ ಹೇಳಿರೆ ಅವ್ವಗಳಿರಾ" ಎಂದು ಅಕ್ಕನವರು ಗೆಳತಿಯರನ್ನು ಕೇಳುವರು.

190. ದೇವರಿಗೆ ಜಗವೆಲ್ಲ ಹೆಣ್ಣು

ಹೆಣ್ಣುಹೆಣ್ಣಾದಡೆ ಗಂಡಿನ ಸೂತಕ.
ಗಂಡು ಗಂಡಾದಡೆ ಹೆಣ್ಣಿನ ಸೂತಕ.
ಮನದ ಸೂತಕ ಹಿಂಗಿದಡೆ

ತನುವಿನ ಸೂತಕಕ್ಕೆ ತೆರಹುಂಟೆ? ಅಯ್ಯಾ,
ಮೊದಲಿಲ್ಲದ ಸೂತಕಕ್ಕೆ ಮರುಳಾಯಿತ್ತು ಜಗವೆಲ್ಲ.
ಎನ್ನ ದೇವ ಚೆನ್ನಮಲ್ಲಿಕಾರ್ಜುನದೇವರ ದೇವನೆಂಬ ಗರುವಂಗೆ
ಜಗವೆಲ್ಲ ಹೆಣ್ಣು ನೋಡಾ ಅಯ್ಯಾ

ಹೆಣ್ಣಿನಲ್ಲಿ "ನಾನು ಹೆಣ್ಣು" ಎಂಬ ಭಾವವಿದ್ದರೆ ಆಗ ಗಂಡಸನ್ನು ಕಂಡಾಗ ನಾಚಿಕೆ, ವೈಯಾರ ಉಂಟಾಗುತ್ತದೆ. ಅದೇ ರೀತಿ ಗಂಡಸಿನಲ್ಲಿ "ನಾನು ಗಂಡು" ಎಂಬ ಪ್ರಜ್ಞೆ ಇದ್ದರೆ ಹೆಣ್ಣನ್ನು ಕಂಡಾಗ ನಾಚಿಕೆ, ಮನಸ್ಚಂಚಲತೆ ಉಂಟಾಗುತ್ತದೆ. ಮನಸ್ಸಿನಲ್ಲಿ ಗಂಡು, ಹೆಣ್ಣು ಎನ್ನುವ ಭಾವ ಅಳಿದಾಗ ಆಗ ಶರೀರದಲ್ಲಿ ನಾಚಿಕೆಯಾಗಲೀ ಮನಸ್ಚಂಚಲತೆಯಾಗಲಿ ಉಂಟಾಗುವುದಿಲ್ಲ. ಜಗತ್ತಿನ ಜನರೆಲ್ಲ ಈ ನಾಚಿಕೆಯಿಂದ ಬಳಲುತ್ತಿದ್ದಾರೆ. ಪರಮಾತ್ಮನೆಂಬ ಗರುವನೊಬ್ಬನೇ ಗಂಡು. ಉಳಿದ ಗಂಡು ಹೆಣ್ಣು ಎಲ್ಲರೂ ದೇವರಿಗೆ ಹೆಣ್ಣಾಗುತ್ತಾರೆ.

191. ಮರಳಿ ಪೂರ್ವಾಶ್ರಮಕ್ಕೆ ಜ್ಞಾನಿಗಳು ಬರುವರೆ?

ಕಟಿಹಾದ ಬಿದಿರಿನಲ್ಲಿ ಮರಳಿ ಕಳಿಲೆ ಮೂಡಬಲ್ಲುದೆ?
ಸುಟ್ಟ ಮಡಕೆ ಮುನ್ನಿನಂತೆ ಮರಳಿ ಧರೆಯನಪ್ಪಬಲ್ಲುದೆ?
ತೊಟ್ಟು ಬಿಟ್ಟು ಬಿದ್ದ ಹಣ್ಣು ಮರಳಿ ತೊಟ್ಟನಪ್ಪ ಬಲ್ಲುದೆ?
ಕಷ್ಟಕರ್ಮಿ ಮನುಜರು ಕಾಣದೆ ಒಂದ ನುಡಿದಡೆ,
ನಿಷ್ಠೆಯುಳ್ಳ ಶರಣರು ಮರಳಿ ಮರ್ತ್ಯಕ್ಕೆ ಬಪ್ಪರೆ
ಚೆನ್ನಮಲ್ಲಿಕಾರ್ಜುನದೇವರ ದೇವಾ.

"ಆದುದು ಆಗಿ ಹೋಯಿತು. ಇನ್ನು ಮನೆಗೆ ಬಂದು ಬಿಡು. ಜನರು ಬಾಯಿಗೆ ಬಂದಂತೆ ಮಾತನಾಡುವರು, ನಿಂದಿಸುವರು" ಎಂದು ತಾಯಿತಂದೆ ಬಂಧು–ಬಳಗ ಅಕ್ಕನವರಿಗೆ ಹಿತೋಪದೇಶ ಮಾಡುವರು. "ಬಲಿತು ಒಣಗಿ ನಿಂತ ಬಿದಿರಿನಲ್ಲಿ ಮತ್ತೆ ಚಿಗುರು ಮೂಡಲು ಸಾಧ್ಯವೆ? ಸುಡಲ್ಪಟ್ಟ ಮಡಿಕೆ ಒಡೆದರೆ ಅದು ಪುನಃ ಹಸಿ ಮಣ್ಣನ್ನು ಕೂಡುವುದೆ? ತೊಟ್ಟು ಬಿಟ್ಟು ಕಳಚಿಕೊಂಡ ಹಣ್ಣು ಮತ್ತೆ ತೊಟ್ಟನ್ನು ಅಪ್ಪುವುದೆ? ಲೋಕದ ಜನರು ಅಜ್ಞಾನಿಗಳಾಗಿ ನಿಂದೆಯ ಮಾತನ್ನಾಡಿದರೆ ನಿಷ್ಠೆಯುಳ್ಳ ಶರಣರು ಪುನಃ ಪೂರ್ವಾಶ್ರಮವನ್ನು ಬೆರೆಸುವರೆ?" ಎಂದು ಅಕ್ಕನವರು ಉತ್ತರಿಸುತ್ತಾರೆ.

192. ಗಾಳಿ ಪರಿಮಳವನುಂಡಂತೆ

ಕಲ್ಲ ತಾಗಿದ ಮಿಟ್ಟೆ ಕೆಲಕ್ಕೆ ಸಾರುವಂತೆ
ಆನು ಬಲ್ಲೆನೆಂಬ ನುಡಿ ಸಲ್ಲದು.
ಲಿಂಗದಲ್ಲಿ ಮರೆದು ಮಚ್ಚಿರ್ದ ಮನವು
ಹೊರಗೆ ಬೀಸರವೋಗದೆ?
ಉರಿ ತಾಗಿದ ಕೋಲು ಗರಿ ತೋರುವುದೆ?
ಮೊರೆದು ಬೀಸುವ ಗಾಳಿ ಪರಿಮಳವನುಂಡಂತೆ ಬೆರಸಬೇಕು
ಚೆನ್ನಮಲ್ಲಿಕಾರ್ಜುನದೇವರ ದೇವನ.

ಕಲ್ಲಿನ ಏಟನ್ನು ತಿಂದ ಮಣ್ಣಿನ ಹೆಂಟೆ ಪಕ್ಕಕ್ಕೆ ಸರಿಯುವುದು. ನಾನು ಬಲ್ಲೆ ಎಂಬ ಅಹಂಕಾರವೂ ಸಲ್ಲದು. ಲಿಂಗದಲ್ಲಿ ಒಂದಾಗಿ ಕರಗಿರುವ ಮನವು ಹೊರಗಿನ ಪ್ರಜ್ಞೆಯನ್ನು ಕಳೆದು

ಕೊಂಡಿರುವುದು. ಉರಿಯ ಸಂಪರ್ಕದಿಂದ ಬೆಂದಿರುವ ಕೋಲು ಅದರ ತುದಿಯನ್ನು ಉಳಿಸಿಕೊಂಡು ತೋರುವುದೆ? ಮೊರೆದು ಬೀಸುವ ಗಾಳಿ ಪರಿಮಳವನ್ನು ಅಡಗಿಸಿಕೊಳ್ಳುವಂತೆ ಪರಮಾತ್ಮನನ್ನು ಮನಸ್ಸು ಬೆರೆಸಬೇಕು.

193. ವೀರ ಶಪಥ

ಮುಂಗೈಯಲ್ಲಿ ವೀರಗಂಕಣವಿಕ್ಕಿ,
ಮುಂಗಾಲಲ್ಲಿ ತೊಡರುಬಾವುಲಿಯ ಕಟ್ಟಿದೆ.
ಗಂಡುಡುಗೆಯನುಟ್ಟೆನೆಂಬ ಮಾತಿನ ಬಿರಿದ ನುಂಗಿದೆನು.
ಚೆನ್ನಮಲ್ಲಿಕಾರ್ಜುನದೇವರ ದೇವಾ
ನಿಮ್ಮಾಣೆಗೆ ಊಣೆಯವ ತಂದೆನಾದಡೆ,
ನಿಮ್ಮ ತೊತ್ತಿನ ಮಗಳಲ್ಲಯ್ಯಾ.

ಯುದ್ಧಕ್ಕೆ ಹೊರಟ ವೀರ ಯೋಧನ ವೇಷವನ್ನು ತೊಟ್ಟಂತೆ ವರ್ಣಿಸಿಕೊಳ್ಳುವ ಅಕ್ಕನವರು ವೀರವೈರಾಗದ ಪ್ರತಿಜ್ಞೆ ಮಾಡುತ್ತಾರೆ.

"ಮುಂಗೈಯಲ್ಲಿ ವೀರಯೋಧನಂತೆ ರುದ್ರಾಕ್ಷಿಯ ವೀರ ಕಂಕಣವನ್ನಿಕ್ಕಿದೆ. ಮುಂಗಾಲಿನಲ್ಲಿ ತೊಡರು ಬಾವುಲಿಯ ಕಟ್ಟಿದೆ. ಕಚ್ಚೆ ಹಾಕಿದ ಗಂಡುಡುಗೆಯ ಉಟ್ಟೆನು "ಈ ಹುಡುಗಿ ಹೆಣ್ಣಾದರೂ ಗಂಡಸಿನಿಂತೆ ವರ್ತಿಸುವಳು" ಎಂಬ ಜನರ ಮಾತಿನ ಬಿರುದನ್ನು ನಾನು ಸ್ವೀಕರಿಸುತ್ತೇನೆ. ದೇವಾ, ನಿಮ್ಮ ಆಜ್ಞೆಗೆ ಲೋಪವನ್ನು ತಂದರೆ ನಿಮ್ಮ ಸೇವಕನ ಮಗಳಲ್ಲ ನಾನು. ನಿಮ್ಮ ಇಚ್ಛೆಯಂತೆ ನಾನು ನಡೆಯುತ್ತೇನೆ.

194. ಬಂಟನ ಭಕ್ತಿ

ಆಳುತನದ ಮಾತನಾಡದಿರೆಲವೊ
ಮೇಲೆ ಕಾರ್ಯದಿಮ್ಮಿತ್ತಣ್ಣಾ.
ಅಲಗಿನ ಮೊನೆಯ ಧಾರೆ ಮಿಂಚುವಾಗ
ಕೊಡದೆ ಕೊಂಕದೆ ನಿಲಬೇಕಯ್ಯಾ.
ಬಂಟ ಬೆಟ್ಟ ಭಕ್ತಿಯೊಂದೆ ಕಂಡಯ್ಯಾ.
ಚೆನ್ನಮಲ್ಲಿಕಾರ್ಜುನ ದೇವರದೇವನಂತಲ್ಲದೊಲ್ಲ.

ಯಾರೋ ಅಕ್ಕನವರನ್ನು ಕುರಿತು ಕೇಳಿದ್ದಾರೆ, "ನೀನೇನು ಹೆಣ್ಣೋ ಗಂಡೋ. ನೋಡಿದರೆ ಹೆಣ್ಣಿನಂತೆ ಕಾಣುವೆ; ವರ್ತನೆ ನೋಡಿದರೆ ಗಂಡಿನದು." ಎಂದು. ಆಗ ಅಕ್ಕನವರು ಉತ್ತರಿಸುತ್ತಾರೆ: "ಆಳುತನದ ಮಾತನ್ನು ಆಡದಿರಣ್ಣ. ಯಾರಾದರೇನು ಮಾಡುವ ಸಾಧನೆ ದೊಡ್ಡದಿರಬೇಕು. ಕತ್ತಿಯ ತುದಿಯು ಎದುರಾಳಿಯಿಂದ ಮಿಂಚುವಾಗ ಭಯದಿಂದ ಕೊಂಕದೆ ನಿಲ್ಲುವವನು ಶೂರ. ಬಂಟನಾದವನು ಎಂಥ ಕಷ್ಟಕ್ಕೂ ಎದೆಗೊಟ್ಟು ನಿಲ್ಲಬೇಕು. ಅದೇ ರೀತಿ ಭಕ್ತಿಯ ಬಗೆಯೂ ಹೀಗೆಯೆ. ಭಕ್ತನು ಎಂಥ ಕಷ್ಟಗಳಿಗೂ ಎದೆಗೊಡಬೇಕು."

195. ವೀರಭಕ್ತಿ

ಅಘಟಿತ ಘಟಿತನ ಒಲವಿನ ಶಿಶು!
ಕಟ್ಟಿದೆನು ಜಗಕ್ಕೆ ಬಿರಿದೆನು.
ಕಾಮ ಕ್ರೋಧ ಮೋಹ ಮದ ಮತ್ಸರಂಗಳಿಗೆ

ಇಕ್ಕಿದೆನು ಕಾಲಲಿ ತೊಡರನು.
ಗುರುಕೃಪೆಯೆಂಬ ತಿಗುರನಿಕ್ಕಿ
ಮಹಾಶರಣೆಂಬ ತಿಲಕವನಿಕ್ಕಿ
ನಿನ್ನ ಕೊಲುವೆ ಗೆಲುವೆ ಶಿವಶರಣೆಂಬ ಅಲಗ ಕೊಂಡು.
ಬಿಡು ಕರ್ಮವೆ, ನಿನ್ನ ಕೊಲ್ಲದೆ ಮಾಣೆನು.
ಕೆಡಹಿಸಿಕೊಳ್ಳದೆನ್ನ ನುಡಿಯ ಕೇಳಾ.
ಕೆಡದ ಶಿವಶರಣೆಂಬ ಅಲಗನೆ ಕೊಂಡು
ನಿನ್ನ ಕೊಲುವೆ ಗೆಲುವೆ ನಾನು.
ಬ್ರಹ್ಮಪಾಶವೆಂಬ ಕಳನನೆ ಸವರಿ,
ವಿಷ್ಣು ಮಾಯೆಯಂಬ ಎಡೆಗೋಲನೆ ನೂಕಿ,
ಎನ್ನೊಡೆಯ ಚೆನ್ನಮಲ್ಲಿಕಾರ್ಜುನದೇವರ ದೇವ
ತಲೆದೂಗಲಿ ಕಾದುವೆನು ನಾನು.

ಅಕ್ಕನವರ ಧೈರ್ಯ, ಎದೆಗಾರಿಕೆ ನಿಸ್ಸೀಮ. ಕೇವಲ ಭಕ್ತಿಯೊಂದೇ ಅವರ ವಿಶೇಷವಲ್ಲ. ವೀರ ವೈರಾಗ್ಯ ಅವರ ವಿಶೇಷ. ಇಲ್ಲಿ ಒಂದು ಸವಾಲನ್ನು ಹಾಕುತ್ತಿದ್ದಾರೆ, ಯಾರಿಗೆ ಅರಿಷಡ್ವರ್ಗಗಳಿಗೆ! ಅಘಟಿತ ಘಟಿತನಾದ ಪರಮಾತ್ಮನ ಒಲವಿನ ಮಗಳು ನಾನು. ಇಡೀ ಜಗತ್ತಿಗೆ ಒಂದು ಸವಾಲನ್ನು ಹಾಕಿ ವೀರವೈರಾಗ್ಯನಿಧಿ ಎಂಬ ಬಿರುದನ್ನು ಪಡೆಯುತ್ತೇನೆ. ಕಾಮ ಕ್ರೋಧ ಲೋಭ ಮದ ಮತ್ಸರಗಳೆಂಬ ಅರಿಷಡ್ವರ್ಗಗಳಿಗೆ ಕಾಲಿನಲ್ಲಿ ತೊಡರುಕೊಡುತ್ತೇನೆ. ಗುರುಕೃಪೆ ಎಂಬ ತಿಗುರನ್ನು ಇಡುತ್ತೇನೆ. (ತಿಗುರು ಎಂದರೆ ಕತ್ತಿಯ ಏಟು ಬೀಳದಿರಲೆಂದು ಮೈಗೆ ಸವರಿಕೊಳ್ಳುವ ಒಂದು ಪರಿಮಳ ದ್ರವ್ಯ) ಗುರು ಲಿಂಗ ಜಂಗಮಕ್ಕೆ ಮಹಾಶರಣೆಂಬ ತಿಲಕವನ್ನು ಹಣೆಯಲ್ಲಿ ಇಟ್ಟುಕೊಳ್ಳುತ್ತೇನೆ. (ಸಾಮಾನ್ಯವಾಗಿ ವೀರರು ಯುದ್ಧಕ್ಕೆ ಹೋರಾಟಕ್ಕೆ ಹೋಗುವ ಮುನ್ನ ಹಿರಿಯರಿಂದ, ಹೆಂಡತಿಯಿಂದ ಆರತಿ ಮಾಡಿಸಿಕೊಂಡು ತಿಲಕವನ್ನು ಇಡಿಸಿಕೊಳ್ಳುವರು) ಎಲೈ ಕರ್ಮವೆಂಬ ಶತ್ರುವೆ, ಶಿವಶರಣು ಎಂಬ ಕತ್ತಿಯನ್ನು ತೆಗೆದುಕೊಂಡು ನಿನ್ನ ಕೊಲ್ಲುವೆ. ಎಲೈ ಭವವೇ(ಹುಟ್ಟು ಸಾವಿನ ಚಕ್ರವೇ) ನನ್ನಿಂದ ಕೆಡಹಿಸಿಕೊಳ್ಳದೆ ನನ್ನ ಮಾತು ಕೇಳು. ನಾಶವಿಲ್ಲದ ಶಿವಶರಣೆಂಬ ಅಲಗನ್ನು ಕೊಂಡು ನಿನ್ನ ಕೊಂದು, ನಾನು ಗೆಲುವನ್ನು ಸಾಧಿಸುವೆ. ಹುಟ್ಟುತ್ತಲೇ, ಹಣೆ ಬರಹ ನಿರ್ಧಾರವಾಗಿರುತ್ತದೆ; ಅದು ಬ್ರಹ್ಮಬರಹ. ಯಾರೂ ತಪ್ಪಿಸಲು ಸಾಧ್ಯವಿಲ್ಲ ಎಂಬ ಯುದ್ಧ ಭೂಮಿಯನ್ನು ಸವರಿ, ಈ ಜಗತ್ತೆಲ್ಲವೂ ವಿಷ್ಣುವಿನ ಮಾಯೆ ಈ ಜಾಲದಿಂದ ತಪ್ಪಿಸಿಕೊಳ್ಳಲು ಯಾರಿಗೂ ಸಾಧ್ಯವಿಲ್ಲ ಎಂಬ ಲೋಕದ ಮಾತಿನ ಎಡೆಗೋಲನ್ನು ನೂಕಿ ಹುಸಿಗೊಳಿಸುತ್ತೇನೆ. ನನ್ನೊಡೆಯ ಚನ್ನಮಲ್ಲಿಕಾರ್ಜುನ ದೇವರ ದೇವನು ತಲೆದೂಗುವಂತೆ ನಾನು ಕಾದುತ್ತೇನೆ."

196. ಮರಳಿತ್ತ ಬಾರೆ

ಉಪಮಾತೀತರು ರುದ್ರಗಣಂಗಳು,
ಅವರೆನ್ನ ಬಂಧುಬಳಗಂಗಳು.
ನಮ್ಮ ಶ್ರೀಶೈಲ ಚೆನ್ನಮಲ್ಲಿಕಾರ್ಜುನದೇವರ ದೇವನೊಲಿದಡೆ
ಮರಳಿತ್ತ ಬಾರೆನಮ್ಮ ತಾಯೆ.

ಮಗಳನ್ನು ಒಲಿಸಿಕೊಳ್ಳಲು, ಮನೆಯಲ್ಲಿ ಉಳಿಸಿಕೊಳ್ಳಲು ವಿಫಲಳಾದ ತಾಯಿ ಲಿಂಗಮ್ಮ "ನಿನ್ನ ಸಾಧನೆ ಪೂರ್ತಿಗೊಂಡ ಬಳಿಕವಾದರೂ ನೀನು ಪುನಃ ಮನೆಗೆ ಬಾ" ಎಂದು ಹೇಳಿದಾಗ ಅಕ್ಕನವರು ಹೀಗೆ ಉತ್ತರಿಸುವರು. "ಶರಣರು ಉಪಮಾತೀತರು. ಅವರು ರುದ್ರಗಣಂಗಳಲ್ಲದೆ ಬೇರಲ್ಲ; ಅವರೇ ನನ್ನ ಬಂಧು ಬಳಗ. ಪರಮಾತ್ಮನೊಲಿದರೆ ಪುನಃ ನಾನು ಇತ್ತ ಬರುವುದಿಲ್ಲ."

197. ಆತ್ಮ ಸಂಗಾತಿ ಪರಮಾತ್ಮ

ಹಸಿವಾದಡೆ ಊರೊಳಗೆ ಭಿಕ್ಷಾನ್ನಗಳುಂಟು,
ತೃಷೆಯಾದಡೆ ಕೆರೆಹಳ್ಳ ಬಾವಿಗಳುಂಟು.
ಅಂಗಶೀತಕ್ಕೆ ಬೀಸಾಟ ಅರಿವೆಗಳುಂಟು.
ಶಯನಕ್ಕೆ ಹಾಳು ದೇಗುಲಗಳುಂಟು.
ಚೆನ್ನಮಲ್ಲಿಕಾರ್ಜುನದೇವರ ದೇವಾ
ಆತ್ಮಸಂಗಾತಕ್ಕೆ ನೀನೆನಗುಂಟು.

ಮಗಳು ಮಹಾದೇವಿಯ ಸ್ಥಿತಿಯನ್ನು ನೋಡಿ ತಾಯಿ ಲಿಂಗಮ್ಮನಿಗೆ ಹೃದಯ ತುಂಬಿ ಬರುತ್ತದೆ; ಕರುಳು ಕಿತ್ತು ಬರುತ್ತದೆ. "ನೀನು ಸುಖವಾಗಿ ರಾಜಕುಮಾರಿಯಂತೆ ಬೆಳೆದವಳು. ಹಸಿವಾದರೆ ಏನು ಮಾಡುವೆ. ಬಾಯಾರಿದರೆ ಎಂತು ಮಾಡುವೆ? ಚಳಿಯಾದಾಗ ಹೇಗೆ ಸಹಿಸುವೆ? ರಾತ್ರಿ ಮಲಗಲಿಕ್ಕೆ ಏನು ಮಾಡುವೆ? ಒಬ್ಬಂಟಿಗಳಾಗಿ ಹೇಗೆ ಪ್ರಯಾಣಿಸುವೆ." ಎಂದು ತಾಯಿ ಕೇಳಿದಾಗ ಅಕ್ಕನವರು ಹೀಗೆ ಉತ್ತರಿಸಿದ್ದಾರೆ.

"ಅವ್ವಾ, ಹಸಿವಾದೊಡೆ ಊರಿನೊಳಗೆ ಯಾರಾದರೂ ಪುಣ್ಯಾತ್ಮರು ಭಿಕ್ಷೆ ನೀಡುವರು. ಬಾಯಾರಿಕೆಯಾದರೆ ಕೆರೆ, ಹಳ್ಳ, ಬಾವಿಗಳಿರುತ್ತವೆ. ಚಳಿಗೆ ಯಾರಾದರೂ ಬೀಸಾಡಿದ ವಸ್ತ್ರಗಳಿರುತ್ತವೆ. ಮಲಗಲಿಕ್ಕೆ ಹಾಳು ದೇವಾಲಯಗಳಿರುತ್ತವೆ. ನಾನು ಒಬ್ಬಂಟಿಯಲ್ಲ. ನನ್ನ ಆತ್ಮ ಸಂಗಾತಿಯಾದ ದೇವನೇ ನನ್ನ ಜೊತೆಗೆ ಸದಾ ಇರುತ್ತಾನೆ."

198. ತಂದೆ ತಾಯಿಯನೊಲ್ಲೆ

ಹಸಿವು ತೃಷೆಯಾದಿಗಳು ಎನ್ನೊಳಗಾದ ಬಳಿಕ,
ವಿಷಯ ವಿಕಾರವೆನ್ನನಿರಿಸಿ ಹೋದವು ಕಾಣಾ ತಂದೆ.
ಅದೇ ಕಾರಣ ನೀವು ಅರಸಿಕೊಂಡು ಬಂದಿರಣ್ಣ.
ನೀವು ಅರಸುವ ಅರಕೆ-ಎನ್ನೊಳಗಾಯಿತ್ತು.
ಎನ್ನ ದೇವ ಚೆನ್ನಮಲ್ಲಿಕಾರ್ಜುನದೇವರ ದೇವಾ.
ತನ್ನೊಳಗೆನ್ನನಿಂಬಿಟ್ಟುಕೊಂಡನಾಗಿ
ಇನ್ನು ನಿಮ್ಮ ತಂದೆ ತಾಯಿತನವನೊಲ್ಲೆ ನಾನು.

"ಹಸಿವು-ತೃಷೆ ಮುಂತಾದ ದೈಹಿಕ ದೌರ್ಬಲ್ಯಗಳಿಗೆ ಈಡಾದರೆ ಅವುಗಳ ಬೆನ್ನುಹತ್ತಿ ವಿಷಯ, ವಿಕಾರಗಳು ಆಶ್ರಯಿಸುವುವು. ಇದೇ ಕಾರಣಕ್ಕೆ ನೀವು ನನ್ನನ್ನು ಹುಡುಕಿಕೊಂಡು ಬಂದಿದ್ದೀರಿ. ನೀವು ಚಿಂತಿಸುವ ಕಾರಣ ನನಗೆ ಗೊತ್ತು. ಆದರೇನು ಮಾಡಲಿ ದೇವರು ತನ್ನೊಳಗೆ ನನ್ನನು ಆವರಿಸಿಬಿಟ್ಟಿದ್ದಾನೆ. ಇನ್ನು ನಿಮ್ಮ ತಂದೆ ತಾಯಿಯ ಸಂಬಂಧ ನನಗೆ ಬೇಡ."

(ಮುಂದುವರಿಯುವುದು)

ಅಕ್ಕನ ಯೋಗಾಂಗ ತ್ರಿವಿಧಿ ಭಾಗ-6

- ಪೂಜ್ಯ ಶ್ರೀ ಜಗದ್ಗುರು
ಬಸವ ಕುಮಾರ ಸ್ವಾಮೀಜಿ

25. ಕೋಣನ ಕೊಂಬಿನ ಮೇಲೆ ಮಾಣದೆ ಕಪಿಯೇರಿ
ಜಾಣೆಯ ಮನೆಯವೊಳು ಪೋಗಲು । ಅವಳೆದ್ದು
ಕೋಣನ ಕಾಲ ಮುರಿದಿಹಳು॥

ಸೊಕ್ಕು, ಗರ್ವ, ಮದ ಇವು ಕೋಣನ ಹೆಸರಿಗೆ ಸಂಭೋದಿಸುವ ಪರ್ಯಾಯ ಪದಗಳು. ಮಾನವನ ಒಳಗೆ ಅಷ್ಟಮದಗಳಿವೆ. ಕುಲಮದ, ಛಲಮದ, ವಿದ್ಯಾಮದ, ತಪೋಮದ, ಧನಮದ, ಯೌವನಮದ, ರೂಪಮದ ಈ ಅಷ್ಟಮದಗಳಿಂದ ಕೂಡಿದ ಕೋಣವೆಂಬ ಜೀವಾತ್ಮನಿಗೆ ಅಹಂಕಾರ-ಮಮಕಾರವೆಂಬ ಎರಡು ಕೊಂಬುಗಳಿವೆ. ಇದರ ತುದಿಯ ಮೇಲೆ ತಿಳುವಳಿಕೆ ಇಲ್ಲದೆ ಅಜ್ಞಾನದಿಂದ ಅಗ್ರಸ್ಥಾನದಲ್ಲಿ ಮನವೆಂಬ ಕಪಿಯು ಏರಿ ದೇಹವನ್ನು ಜೀವಾತ್ಮನನ್ನು ಹಾಳು ಮಾಡಿ ದುಃಖಕ್ಕೀಡು ಮಾಡುತ್ತಿರುತ್ತದೆ. ದೇವರ ಹಾಗೂ ಗುರುವಿನ ಅನುಗ್ರಹ ಆಶೀರ್ವಾದದಿಂದ ಮನಸ್ಸನ್ನು ಪರಿಶುದ್ಧಗೊಳಿಸಿ ಯೋಗಕ್ಕೆ ಮೊರೆಹೊಕ್ಕು ಜಾಣೆಯ ಅಂದರೆ ಕುಂಡಲಿನಿ ಶಕ್ತಿಯ ಚಿದ್ಬೆಳಕನ್ನು ಪ್ರವೇಶಿಸಿದಾಗ ಘನಮನ ಅಂತರಂಗ ಬಹಿರಂಗವನಾವರಿಸಿದಾಗ ಗರ್ವದಿಂದೊಡಗೂಡಿದ ಜೀವಾತ್ಮನ ಗುಣಗಳಾದ ಅಹಂಕಾರ-ಮಮಕಾರಗಳನ್ನು ತೊಡೆದು ಹಾಕಿದ್ದನ್ನು ತುಂಬಾ ಮಾರ್ಮಿಕವಾಗಿ ತಿಳಿಸುತ್ತಿದ್ದಾರೆ ಮಹಾದೇವಿ ಅಕ್ಕನವರು.

26. ಹೇಮಕೂಟದ ತುದಿಗೆ ಆ ಮಹಾಗಜವೇರಿ
ಸೋಮನ ಕಳೆಯ ಸವಿದುಂಡು । ಮದವೇರಿ
ಕಾಮನ ಪಿಡಿದು ಬಡಿಯಿತ್ತು॥

ಆಧಾರ ಚಕ್ರದಲ್ಲಿ ಅಧೋಮುಖವಾಗಿ ಹುದುಗಿಕೊಂಡಿರುವ ಕುಂಡಲಿನಿ ಶಕ್ತಿಯನ್ನು (ಸರ್ಪವನ್ನು) ಆನೆಯ ಬಲವಾದ ಶಕ್ತಿಯಂತೆ ಇರುವ ಯೋಗದಿಂದ ಊರ್ಧ್ವಕ್ಕೆ ಪರಿಶುದ್ಧಗೊಂಡ ಜೀವಾತ್ಮನನ್ನು ಆರು ಚಕ್ರಗಳನ್ನು ಒಂದೊಂದಾಗಿ ದಾಟುತ್ತ ನೆತ್ತಿಯ ತುದಿಯಭಾಗ ಸಹಸ್ರಾರ ಚಕ್ರ, ಬ್ರಹ್ಮರಂಧ್ರದ ಸ್ಥಾನದ ತುಟ್ಟ ತುದಿಗೆ ಏರಿಸಿದಾಗ ಚಂದ್ರನಲ್ಲಿ ಹೇಗೆ ಆಹ್ಲಾದಕರವಾದ ಶೈತ್ಯವಿರುವುದೋ ಅದೇ ರೀತಿ ಚಿದಮೃತವನ್ನು ಪಾನ ಮಾಡಿದಾಗ ದಿವ್ಯ ಶಕ್ತಿಯು ಆವರಿಸಿದಾಗ ಲೌಕಿಕ ಜಗತ್ತಿನ ಜನರೆಲ್ಲರನ್ನು ಆವರಿಸಿದ ಕಾಮವನ್ನು ತೊಡೆದು ಹಾಕಿದೆನೆಂದು ಮಹಾದೇವಿಯಕ್ಕನವರು ಅನುಭವದ ವಾಣಿಯನ್ನು ನಮಗೆ ಇಟ್ಟಿದ್ದಾರೆ.

27 ಕೊಂಡಕ್ಕೆ ಬೀಳ್ವಂತ ಲಂಡ ಸ್ತ್ರೀಯಳು ತಾನು
ದಂಡೆಯ ಕುಣಿಕೆ ಸಡಿಲಿಸಿ । ಕೊಂಡದ
ಕೆಂಡದೊಳಾಳಿ ಮುಳುಗಿದಳು॥

ಅಜ್ಞಾನದಿಂದ ನಾನು-ನನ್ನದು ಅಥವಾ ಅಹಂಕಾರ-ಮಮಕಾರದಿಂದ ತಾಪತ್ರಯಗಳೆಂಬ ಕಿಚ್ಚಿನ ಸಂಸಾರವೆಂಬ ತಗ್ಗಿನಲ್ಲಿ ದುರಾಶೆಯಿಂದ ಕೂಡಿದ ದುಷ್ಟ ಮನಸ್ಸೆಂಬ ಸ್ತ್ರೀ (ಮಾಯೆ)ಬಿದ್ದು

ಕಷ್ಟಪಡುತಿರುವ ಸಮಯದಲ್ಲಿ ಸದ್ಗುರುವಿನ ಕಾರುಣ್ಯದಿಂದ ಸಾಧನಾ ಬಲದಿಂದ ಸುಜ್ಞಾನವನ್ನು ಪಡೆದುಕೊಂಡು ಪರಿಶುದ್ಧವಾದ ಘನಮನದಿಂದ ನಾನು-ನನ್ನದು ಎಂಬ ಅಹಂಕಾರ ಮಮಕಾರಗಳನ್ನು ತ್ಯಾಗಮಾಡಿ ಅಧಿಭೌತಿಕ, ಅಧಿದೈವಿಕ, ಅಧ್ಯಾತ್ಮಿಕವೆಂಬ ತ್ರಿತಾಪಗಳನ್ನು ದೇವನಿಗೆ ಸಮರ್ಪಿಸಿ ನಿರಾಶೆಯಿಂದ ಮಾಯೆ(ದುಷ್ಟಸ್ತ್ರೀ)ಯನ್ನು ಗೆಲಿದು ಜನನ ಮರಣ ರೂಪ ಸಂಸಾರವನ್ನು ಸಸಾರವನ್ನಾಗಿ ಮಾಡಿಕೊಂಡು ಚಿದ್ಬೆಳಗಿನ ಸ್ವರೂಪ ತಾನಾದುದನ್ನು ಅಕ್ಕನವರು ಪ್ರತಿಪಾದಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ಈ ಕೆಳಗಿನ ವಚನವನ್ನು ಮೆಲುಕು ಹಾಕ ಬಹುದು. ಅಹಂಕಾರವನೆ ಮರೆದು ದೇಹಗುಣಂಗಳನೆ ಜರಿದು ಇಹ-ಪರವು ತಾನೆಂದರಿದ ಕಾರಣ, ಸೋಹಂಭಾವವು ಸ್ವಸ್ಥಿರವಾಗಿ, ಸಹಜ ಉದಯದ ನಿಲುವಿಂಗೆ ಮಹಾಘನಲಿಂಗದ ಬೆಳಗು ಸ್ವಾಯತವಾದ ಕಾರಣ ಗುಹೇಶ್ವರಾ ನಿಮ್ಮ ಶರಣ ಉಪಮಾತೀತ ನೋಡಯ್ಯ ಎಂದು ವ್ಯೋಮಕಾಯ ಸಿದ್ಧರಾದ ಅಲ್ಲಮಪ್ರಭುದೇವರು ನುಡಿದಿದ್ದಾರೆ.

28. ಕುಂಡಲಿಯ ಸರ್ಪನು ತುಂಡ ಮೇಲಕೆ ತೆಗೆಯೆ
ಮಂಡಲವು ಮೂರು ಬೆಳಗಾಗೆ। ಉರಿಯುವ ಅಖಂಡ
ಜ್ಯೋತಿಯೊಳು ಬಯಲಾದೆ॥

ಪ್ರತಿಯೊಬ್ಬ ಮಾನವ ಸಹಜವಾಗಿ ಸೃಷ್ಟಿಯ ನಿಯಮದ ಪ್ರಕಾರ ಜಾಗ್ರ-ಸ್ವಪ್ನ-ಸುಷುಪ್ತಿ ಅವಸ್ಥೆಗಳನ್ನು ಸ್ಥೂಲ-ಸೂಕ್ಷ್ಮ-ಕಾರಣ ಶರೀರಗಳಿಂದ ಪಡೆಯುತ್ತಾ ಅನ್ನಮಯ, ಪ್ರಾಣಮಯ, ಮನೋಮಯ ಕೋಶಗಳಿಂದ ಕೂಡಿದ್ದಾನೆ. ನಿಷ್ಕಾಮಕರ್ಮದ ಫಲದಿಂದ ಗುರುದೇವನ ಅನುಗ್ರಹ ಆಶೀರ್ವಾದದಿಂದ ಇನ್ನೆರಡು ಅವಸ್ಥೆಗಳನ್ನು ಅಂದರೆ ತೂರ್‍ಯಾವಸ್ಥೆ, ತೂರ್‍ಯತೀತಾವಸ್ಥೆ ಯನ್ನು ಪ್ರಯತ್ನ ಪೂರ್ವಕವಾಗಿ ಗಳಿಸಿಕೊಂಡು ಅವನ್ನು ಕಾರ್ಯಗತಗೊಳಿಸಲು ಉತ್ಕೃಷ್ಟ ಸಾಧನೆಯಿಂದ ಆಧಾರ ಚಕ್ರದಲ್ಲಿ ಸತ್ತಂತೆ ಕೆಳಮುಖವಾಗಿರುವ ಕುಂಡಲಿನಿ ಸರ್ಪವನ್ನು ಯೋಗಿಕ ಶಕ್ತಿಯಿಂದ ಆರೂ ಚಕ್ರಗಳನ್ನು ಜಾಗ್ರತಗೊಳಿಸುತ್ತ ಸಹಸ್ರಾರು ಚಕ್ರದವರೆಗೆ ಏರಿದಾಗ ಅಲ್ಲಿಯ ಅಮೃತವನ್ನು ಸವಿದಾಗ ಜಾಗ-ಸ್ವಪ್ನ-ಸುಷುಪ್ತಿ ಅವಸ್ಥೆಯನ್ನು ಪಡೆಯುವ ಸ್ಥೂಲ-ಸೂಕ್ಷ್ಮ-ಕಾರಣ ಶರೀರಗಳನ್ನು ಹಾಗೂ ಅನ್ನಮಯ, ಪ್ರಾಣಮಯ, ಮನೋಮಯ ಕೋಶಗಳನ್ನು ಸುಜ್ಞಾನದಿಂದ ಬೆಳಗಿಸಿಕೊಂಡು ಬಯಲಲ್ಲಿ ಬಯಲಾದೆನೆಂದು ದಿಗಂಬರವನ್ನೇ ದಿವ್ಯಾಂಬರವನ್ನಾಗಿಸಿಕೊಂಡಂಥ ಮಹಾದೇವಿಯಕ್ಕನವರು ಅನುಭಾವವನ್ನು ನಮಗೆ ಉಣಿಸುತ್ತಿದ್ದಾರೆ.

29. ಅಷ್ಟಾವರಣದ ಹಣ್ಣು ಬಟ್ಟಬಯಲೊಳಗಿರಲು
ಅಷ್ಟಾಂಗಯೋಗವನು ಮಾಡಿ। ಬಳಲುವರು
ದೃಷ್ಟಿ ಇಡುವುದನು ಮರೆದಿಹರು॥

ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಸೂರ್ಯ, ಚಂದ್ರ ಆತ್ಮರುಗಳೆಂಬ ಎಂಟು ಆವರಣಗಳಿಂದ ಕೂಡಿದ ಈ ಶರೀರದಲ್ಲಿ ಲಿಂಗದೇವ ಎಂಬ ಛೈತನ್ಯ ಸ್ವರೂಪ ಹಣ್ಣಿದೆ. ಕಾಯ ಮಣ್ಣು-ಜೀವ ಬಯಲು. ಪರಶಿವ ಚೈತನ್ಯದೊಡನೆ ಒಡವೆರೆದು ಒಂದಾಗಲು ಕೆಲವರು ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ ಸಮಾಧಿ ಎಂಬ ಅಷ್ಟಾಂಗಯೋಗವನ್ನು ಮಾಡುತ್ತಾ ಕಷ್ಟಪಡುತ್ತಿದ್ದಾರೆ. ಈ ಯೋಗವು ಚಿತ್ತವೃತ್ತಿ

ನಿರೋಧಕ್ಕೆ ಮಾತ್ರ ಸೀಮಿತವೆಂಬುದನ್ನು ಅರಿಯದೆ ಬಳಲುವರೆಂದು ಮಹಾದೇವಿಯಕ್ಕನವರು ಮರುಗಿದ್ದಾರೆ. ಹಾಗಾದರೆ ಏನು ಮಾಡಬೇಕೆಂದು ಪ್ರಶ್ನೆ ಉದ್ಭವಿಸುವುದು. ಇದಕ್ಕೆ ಉತ್ತರ ಸರಳವಾಗಿದೆ. ಧರ್ಮಗುರು ಬಸವಣ್ಣನವರು ಸಂಶೋಧಿಸಿ ಕೊಟ್ಟಂಥ ಇಷ್ಟಲಿಂಗವನ್ನು ಸದ್ಗುರುವಿನಿಂದ ದೀಕ್ಷಾಬದ್ಧನಾಗಿ ಪಡೆದು ಎಡ ಅಂಗೈಯಲ್ಲಿ ಇಟ್ಟು ಪೂಜಿಸಿ ಭಕ್ತಿ ಶ್ರದ್ಧೆಯಿಂದ ಮಂತ್ರಜಪದೊಂದಿಗೆ ಲಿಂಗಾನುಸಂಧಾನ ಮಾಡುತ್ತಾ ಹೋದರೆ ಮಾತ್ರ ಬಯಲಿಗೆ ಬಯಲು ಸ್ವರೂಪವಾದ ಲಿಂಗದೇವನೊಡನೆ ಒಡವೆರೆದು ಒಂದಾಗಲು ಸಾಧ್ಯವೆಂದು ಅರುಹಿದ್ದಾರೆ.

(ಮುಂದುವರಿಯುವುದು..)

ತಟ್ಟೆ -ಬಟ್ಟಲು-ಲೋಟ ದಾನಿಗಳಲ್ಲಿ ಮನವಿ

ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳವು ಜ್ಞಾನ ದಾಸೋಹ ಮತ್ತು ಅನ್ನದಾಸೋಹಕ್ಕೆ ಪ್ರಖ್ಯಾತಿಯನ್ನು ಪಡೆದಿದೆ. ಪ್ರಸಾದ ದಾಸೋಹಕ್ಕೆ ಎಲೆ ನಮ್ಮ ಧರ್ಮದ ಪ್ರಕಾರ ಸೂಕ್ತವಲ್ಲವೆಂದು ಸಾವಿರಾರು ಜನರು ಪಂಕ್ತಿಯಲ್ಲಿ ಕುಳಿತರೂ ಎಲ್ಲರಿಗೂ ತಟ್ಟೆಯಲ್ಲೇ ಎಡೆಮಾಡಲಾಗುವುದು. ಬಹಳ ವರ್ಷಗಳ ಹಿಂದೆ ಮನವಿ ಮಾಡಿದಾಗ ಸಾವಿರಾರು ತಟ್ಟೆಗಳನ್ನು ದಾನಿಗಳು ತಂದು ಕೊಟ್ಟರು. ಕೆಲವು ತಟ್ಟೆಗಳು ಮುರಿದಿವೆ; ಕೆಲವು ತುಕ್ಕು ಹಿಡಿದಿವೆ. ಈಗ ಪುನಃ ಅವುಗಳ ಸಂಖ್ಯೆ ವೃದ್ಧಿಸಬೇಕಾಗಿದೆ. ಉತ್ತಮ ದರ್ಜೆಯ, ಕಂಠ ಇರುವ ಸ್ಟೀಲ್‌ತಟ್ಟೆ (12" ಅಗಲ)ಯ ಬೆಲೆ 80 ರಿಂದ 90 ರೂವರೆಗೆ ಆಗುವುದು.

ಎರಡನೆಯದಾಗಿ ಬಟ್ಟಲು ಬೇಕಾಗಿವೆ. ಶರಣ ಮೇಳದ ಐದೂ ದಿನ ಸಿಹಿಯನ್ನು ಕೊಡಲಾಗುವುದು. ಪಾಯಸ, ಗೋಧಿ ಹುಗ್ಗಿ ಮಾಡಿದಾಗ ಇವು ಅನ್ನ ಸಾರಿನ ಜೊತೆ ಸೇರಿಕೊಂಡು ಬಿಡುತ್ತವೆ. ಸಿಹಿಯನ್ನು ಎಡೆ ಮಾಡಲು 10,000(ಹತ್ತು ಸಾವಿರ) ಬಟ್ಟಲುಗಳನ್ನು ಸಂಗ್ರಹಿಸುವ ಯೋಜನೆ ರೂಪಿಸಲಾಗಿದೆ. ಬೆಳಗಾವಿಯ ಸ್ಟೀಲ್ ಫ್ಯಾಕ್ಟರಿಯಲ್ಲಿ ವಿಚಾರಿಸಿದಾಗ ಒಂದು ಬಟ್ಟಲಿಗೆ 10ರಿಂದ 12ರೂ ಬೀಳುವ ಸಾಧ್ಯತೆ ಉಂಟೆಂದಿದ್ದಾರೆ. ಯಾರಾದರೂ ದಾನಿಗಳು ಒಂದು ಲಕ್ಷ ರೂ ಕೊಟ್ಟರೆ ಅವರ ದೇಣಿಗೆಯಿಂದಲೇ ಎಲ್ಲ ಬಟ್ಟಲು ಖರೀದಿಸಲಾಗುವುದು.

ಮೂರನೆಯದಾಗಿ ಟೀ ಕುಡಿಯುವ ಚಿಕ್ಕಲೋಟ ಬೇಕಾಗಿವೆ. ಅವುಗಳ ಬೆಲೆ ಒಂದಕ್ಕೆ 6 ರೂ ಆಗಬಹುದು.

ಶರಣ ಬಂಧುಗಳು ಶರಣ ಮೇಳಕ್ಕೆ ಬರುವಾಗ ತಮ್ಮ ಶಕ್ತ್ಯಾನುಸಾರ ತಗೊಂಡುಬಂದು ಸಲ್ಲಿಸಿರಿ. ತಟ್ಟೆ-ಲೋಟ-ಬಟ್ಟಲು ಒಂದೇ ರೀತಿ ಇರಲಿ ಎನ್ನುವವರು ಹಣವನ್ನು ಬ್ಯಾಂಕ್ ಮೂಲಕ ಕಳಿಸಿ, ಫೋನ್ ಮೂಲಕ ತಿಳಿಸಬೇಕು.

Sharana Mela Utsava Samithi, SB A/c 10818354899
State Bank of India ದ IFSC Code ಕೋಡ್ SBIN0007172

ಕಲ್ಯಾಣ ಕಿರಣ ಓದುಗರಿಗೆ ಸೂಚನೆ

ಚಂದಾ ಅವಧಿ ಮುಗಿದವರಿಗೆ ಸೂಚನೆ ಕಳಿಸಲಾಗುವುದು. ತಕ್ಷಣ ಹಣ ಕಳಿಸಿರಿ, ನವೀಕರಿಸಿರಿ. ನಿಮ್ಮ ಮೊಬೈಲ್ ಸಂಖ್ಯೆ ಮರೆಯದೆ ತಿಳಿಸಿರಿ. ವಿ.ಸೂ: ಚಂದಾ ಕಳಿಸಲು ಅನುಕೂಲ ಇಲ್ಲದವರು ಫೋನ್ ಮೂಲಕ ಪತ್ರಿಕೆ ಕಳಿಸಲು ತಿಳಿಸಿರಿ. ಶರಣ ಮೇಳ (ಕಲ್ಯಾಣ ಪರ್ವ)ದಲ್ಲಿ ಚಂದಾ ಹಣವನ್ನು ಪ್ರಾಮಾಣಿಕವಾಗಿ ಕಟ್ಟಿರಿ. ಸಂಪರ್ಕಿಸುವ ದೂರವಾಣಿ: 9945806297

13ನೇ ಯಶಸ್ವೀ ಕಲ್ಯಾಣ ಪರ್ವ

–ಸಚ್ಚಿದಾನಂದ ಚಟ್ನಳ್ಳಿ ಬಿ.ಇ.

ದಿನಾಂಕ 18–10–2014ರಂದು ಬೆಳಿಗ್ಗೆ 8–00ಗಂಟೆಗೆ ಗುರುಬಸವೇಶ್ವರ ಪೂಜಾವ್ರತದೊಂದಿಗೆ ವೇದಿಕೆ ದೈವೀಕರಣಗೊಂಡು ದಿನಾಂಕ 20–10–2014 ರಂದು ಜಗದ್ಗುರು ಅಲ್ಲಮ ಪ್ರಭು ಶೂನ್ಯ ಪೀಠಾರೋಹಣದೊಂದಿಗೆ 13ನೇ ಕಲ್ಯಾಣ ಪರ್ವವು ಅತ್ಯಂತ ಯಶಸ್ವಿಯಾಗಿ ಸಮಾರೋಪಗೊಂಡಿತು.

ಕಲ್ಯಾಣ ಕೈಲಾಸವೆಂಬ ನುಡಿ ಹಸನಾಯಿತ್ತು.
ಒಳಗೂ ಕಲ್ಯಾಣ ಹೊರಗೂ ಕಲ್ಯಾಣ.
ಇದರಂತುವನಾರು ಬಲ್ಲರಯ್ಯಾ?
ನಿಮ್ಮ ಸತ್ಯ ಶರಣರ ಸುಳುಹು ತೋರುತ್ತಿದೆಯಯ್ಯಾ
ನಿಮ್ಮ ಶರಣ ಬಸವಣ್ಣನ ಕಾಂಬೆನೆಂಬ ತವಕವೆನಗಾಯಿತ್ತು.
ಕೇಳಾ ಚೆನ್ನಮಲ್ಲಿಕಾರ್ಜುನದೇವರ ದೇವಾ.

ಎನ್ನುವ ಅಕ್ಕಮಹಾದೇವಿಯವರ ವಚನದಂತೆ ಬಸವ ಕಲ್ಯಾಣದ ಹತ್ತಿರ ಹೋಗುತ್ತಿದ್ದಂತೆ ಒಂದು ರೀತಿಯಲ್ಲಿ ಮೈ–ಪುಳಕಗೊಳ್ಳಲಾರಂಭಿಸುತ್ತದೆ. 8–9ಕಿ.ಮೀ. ದೂರದಿಂದಲೇ ಗೋಚರಿಸುವ ಗುರುಬಸವಣ್ಣನವರ ಮೂರ್ತಿ "ನಿಮ್ಮ ಶರಣ ಬಸವಣ್ಣನ ಕಾಂಬೆನೆಂಬ ತವಕವೆನಗಾಯಿತ್ತು" ಎಂದು ಅಕ್ಕನವರಿಗೆ ತವಕವಾದಂತೆ ನಮ್ಮ ಮನಸ್ಸಿನಲ್ಲಿ ಅದರ ದಿವ್ಯತೆಯನ್ನು ನೋಡಲು ಕುತೂಹಲ ಹುಟ್ಟಿಸುತ್ತಿತ್ತು. ಬಸವ ಕಲ್ಯಾಣದ ಹತ್ತಿರ ಹೋದಂತೆ, ಕಾವಿಯ ಮೇಲುವಸ್ತ್ರಧಾರಿಯಾದ ಸತ್ಯ ಶರಣರ ಸುಳುಹು, ಆ ದಿವ್ಯವಾದ ಗುರು ಬಸವಣ್ಣನವರ ಮೂರ್ತಿ ಅಕ್ಷರಶಃ ಅಕ್ಕನವರ ಮೇಲಿನ ವಚನವನ್ನು ನೆನಪು ಮಾಡುತಿತ್ತು.

ದಿನಾಂಕ 18ರಂದು ಬೆಳಿಗ್ಗೆ 11–00ಗಂಟೆಗೆ ಆರಂಭವಾದ ಮೊದಲದಿನದ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡುತ್ತ ಮಾತಾಜಿಯವರು ತಾವು ಮೊದಲ ಬಾರಿಗೆ ಕೂಡಲಸಂಗಮಕ್ಕೆ ಹೋದ ಘಟನೆ ಮತ್ತು ಅಂದಿನ ಕೂಡಲ ಸಂಗಮದ ಪರಿಸ್ಥಿತಿಯನ್ನು ನೆನಪಿಸಿಕೊಂಡರು. "1987ರಲ್ಲಿ ಕೂಡಲ ಸಂಗಮೇಶ್ವರ ದೇವಸ್ಥಾನ ಹಾಗು ಗುರು ಬಸವಣ್ಣನವರ ಲಿಂಗೈಕ್ಯ ಮಂಟಪವನ್ನು ಸ್ಥಳಾಂತರ ಮಾಡುವ ನಿರ್ಧಾರವನ್ನು ಸರಕಾರ ಕೈಗೊಂಡಾಗ, ಅವುಗಳನ್ನು ತಮ್ಮ ಮೂಲ ಸ್ಥಾನದಲ್ಲಿಯೇ ಉಳಿಸಿಕೊಳ್ಳಬೇಕು ಎಂದು ಸರಕಾರದ ವಿರುದ್ಧ ಹೋರಾಟ ಮಾಡಲು ಕೂಡಲ ಸಂಗಮಕ್ಕೆ ಹೋದೆವು. ವ್ಯಕ್ತಿಯೊಬ್ಬ ಐ.ಎ.ಎಸ್ ಅಧಿಕಾರಿಯಾಗಿದ್ದು, ಭವ್ಯವಾದ ಬಂಗಲೆಯಲ್ಲಿ ವಾಸಮಾಡುತ್ತ ಸಕಲ ಸೌಲಭ್ಯ ಗಳೊಂದಿಗೆ ಜೀವನ ಸಾಗಿಸುವವನ ತಂದೆ–ತಾಯಿಯರು ಗುಡಿಸಿಲಿನಲ್ಲಿ ವಾಸ ಮಾಡುತ್ತ ಹರಕು ಬಟ್ಟೆಗಳನ್ನು ಧರಿಸಿಕೊಂಡು ರಸ್ತೆ ಪಕ್ಕದಲ್ಲಿ ಭಿಕ್ಷೆ ಬೇಡುವಂಥ ಪರಿಸ್ಥಿತಿ ಹೇಗಿರುತ್ತೋ ಕೂಡಲ ಸಂಗಮದ ಅಂದಿನ ಪರಿಸ್ಥಿತಿಯೂ ಹಾಗೆಯೇ ಇತ್ತು. ಅತ್ಯಂತ ಶ್ರೀಮಂತವಾದ ಲಿಂಗಾಯತ ಸಮಾಜ ತನಗೆ ಧರ್ಮಕೊಟ್ಟ ಅಪ್ಪ ಬಸವಣ್ಣನವರ ಕ್ಷೇತ್ರ ಕೂಡಲ ಸಂಗಮವನ್ನು ಕಡೆಗಣಿಸಿರುವುದಕ್ಕಾಗಿ ನೊಂದು, 1987ರಲ್ಲಿ ಲಿಂಗೈಕ್ಯ ಪೂಜ್ಯ ಅಪ್ಪಾಜಿಯರವರೊಡಗೂಡಿ ಕೂಡಲಸಂಗಮದಲ್ಲಿ ಬಸವ ಮಹಾಮನೆ ಚಾರಿಟೆಬಲ್ ಟ್ರಸ್ಟ್ ಸಂಸ್ಥಾಪಿಸಿ, 13 ಎಕರೆ ಜಾಗವನ್ನು ಖರೀದಿಸಿ ಕೂಡಲಸಂಗಮದ ಜೀರ್ಣೋದ್ಧಾರ ಕಾರ್ಯ ಕೈಗೊಂಡೆವು. 1988ರಲ್ಲಿ ಪ್ರಥಮ ಐತಿಹಾಸಿಕ ಶರಣಮೇಳ ನಡೆಸಿದಾಗ 2–ಲಕ್ಷಕ್ಕೂ ಹೆಚ್ಚು ಶರಣರು ಅಲ್ಲಿ ನೆರೆದಿರುವುದನ್ನು ಕಂಡು ನಮಗೆ ಹೆಚ್ಚಿನ ಉತ್ಸಾಹ ತಂದು ಕೊಟ್ಟಿತು. ಕೂಡಲ ಸಂಗಮದಲ್ಲಿ ಮಹಾಮನೆ, ಶರಣಲೋಕ,

ಧ್ಯಾನ ಮಂಟಪ ಹಾಗು ಶರಣಧಾಮಗಳನ್ನು ಶರಣರ ಸಹಕಾರದಿಂದ ನಿರ್ಮಿಸಿದ್ದೇವೆ. ಕೂಡಲ ಸಂಗಮವು ಒಂದು ಹಂತಕ್ಕೆ ಅಭಿವೃದ್ಧಿ ಹೊಂದುತ್ತಿರುವಾಗಲೇ ಜೆ.ಎಚ್ ಪಟೇಲ್ ನೇತೃತ್ವದ ಕರ್ನಾಟಕ ಸರಕಾರ ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಿ, ಕೂಡಲ ಸಂಗಮವನ್ನು ಅಂತರ್ರಾಷ್ಟ್ರೀಯ ಪ್ರವಾಸಿ ತಾಣ/ಧಾರ್ಮಿಕ ಕ್ಷೇತ್ರವಾಗಿ ಅಭಿವೃದ್ಧಿ ಪಡಿಸಿರುವುದು ಇಂದು ನಮಗೆಲ್ಲರಿಗೂ ಅತ್ಯಂತ ಆನಂದವನ್ನು ತಂದಿದೆ" ಎಂದು ಮಾತಾಜಿಯವರು ತಮ್ಮ ಮನದಾಳದ ಮಾತುಗಳನ್ನು ಹೇಳಿದರು.

"ನಮ್ಮ ಮತ್ತು ಅಪ್ಪಾಜಿಯವರ ಮನಸ್ಸಿನಲ್ಲಿ ಕೂಡಲ ಸಂಗಮದ ನಂತರ ಬಸವಕಲ್ಯಾಣದಲ್ಲಿ ಏನಾದರೂ ಒಂದು ಕಾರ್ಯ ಮಾಡಬೇಕು ಎನ್ನುವ ಬಯಕೆ ಇದ್ದೇ ಇತ್ತು. ಕೂಡಲ ಸಂಗಮದ ಕಾರ್ಯಗಳನ್ನು ಕೈಗೆತ್ತಿಕೊಂಡಿರುವುದರಿಂದ ಸಮಯ ಸಿಕ್ಕಿರಲಿಲ್ಲ. ಮಾತಾಜಿಯವರು ಬಸವಣ್ಣನವರ ಕಾರ್ಯಕ್ಷೇತ್ರ ಬಸವ ಕಲ್ಯಾಣದಲ್ಲಿ ಯಾವುದೇ ಕಾರ್ಯ ಮಾಡುತ್ತಿಲ್ಲ ತಾವು ಇಲ್ಲಿಯೂ ಅಭಿವೃದ್ಧಿ ಕಾರ್ಯ ಮಾಡಬೇಕು ಎಂದು ಬೀದರ–ಗುಲ್ಬರ್ಗಾ ಭಾಗದ ಶರಣರು ಜಗಳ ಮಾಡುತ್ತಿದ್ದರು. ಅವರ ಒತ್ತಾಸೆಗೆ ಮಣಿದು 2001 ರಲ್ಲಿ ಬಸವ ಕಲ್ಯಾಣದಲ್ಲಿ 3 ಎಕರೆ ಜಾಗವನ್ನು ಖರೀದಿ ಮಾಡಿ, 2002ರಲ್ಲಿ ಪ್ರಥಮ ಕಲ್ಯಾಣ ಪರ್ವ ಮಾಡಿ, ಜಗದ್ಗುರು ಅಲ್ಲಮ ಪ್ರಭು ಶೂನ್ಯ ಪೀಠವನ್ನು ಪುನರ್ ಪ್ರತಿಷ್ಠಾಪನೆ ಮಾಡಿದೆವು. ತಮ್ಮೆಲ್ಲರ ಧನ ದಾಸೋಹ ದಿಂದಾಗಿ 2012ರಲ್ಲಿ ಗುರುಬಸವಣ್ಣನವರ 108 ಅಡಿ ಪುತ್ಥಳಿ ನಿರ್ಮಾಣ ಕಾರ್ಯ ಪೂರ್ತಿಮಾಡಿದೆವು.ಮಹಾಮನೆ, ಗವಿಗಳು, ಶರಣಗ್ರಾಮಗಳನ್ನು ನಿರ್ಮಿಸಿ ಅಂದಿನ ಶರಣರ ಜೀವನ ಚರಿತ್ರೆಯನ್ನು ಶಿಲ್ಪಕಲೆಗಳ ಮೂಲಕ ಬಿಂಬಿಸಿದ್ದೇವೆ. ಉಬ್ಬು ಚಿತ್ರ, ಶಿಲ್ಪ ಮತ್ತು ಧ್ವನಿ ಮತ್ತು ಬೆಳಕಿನ ಸಂಯೋಜನೆಯನ್ನೊಳಗೊಂಡ ಗುರು ಬಸವಣ್ಣನವರ ಜೀವನ ಚರಿತ್ರೆ ಸಾರುವ ಆಯ್ದ ಮಹತ್ವದ 36 ಘಟನೆಗಳನ್ನು ಮೂರ್ತಿಯ ಕೆಳಭಾಗದಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಕರ್ನಾಟಕ ಸರಕಾರವೂ ಕೂಡ ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರವನ್ನು ರಚನೆ ಮಾಡಿ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದೆ ಇವೆಲ್ಲವೂಗಳಿಂದ ಬಸವಕಲ್ಯಾಣಕ್ಕೆ ಹೊಸ ರೂಪ ಬಂದಿದೆ. "ಕಲ್ಯಾಣ ಕೈಲಾಸವೆಂಬ ನುಡಿ ಹಸನಾಯಿತ್ತು" ಎನ್ನುವ ಅಕ್ಕನವರ ವಾಣಿಯಂತೆ ಇಂದು ಬಸವಕಲ್ಯಾಣಕ್ಕೆ ಬಂದವರೆಲ್ಲರೂ ಗುರು ಬಸವಣ್ಣನವರನ್ನು 108 ಅಡಿ ಪುತ್ಥಳಿಯ ಮೂಲಕ ದರ್ಶನ ಮಾಡಿ ಆನಂದ ಹೊಂದುತ್ತಿದ್ದಾರೆ." ಎಂದು ಮಾತಾಜಿಯವರು ಪ್ರಾಸ್ತಾವಿಕವಾಗಿ ತಮ್ಮ ಕಂಚಿನ ಕಂಠದಿಂದ ಸುದೀರ್ಘವಾಗಿ ಮಾತನಾಡಿದರು.

೧೩ನೇ ಕಲ್ಯಾಣ ಪರ್ವ ಉತ್ಸವದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ನೇಮಕಗೊಂಡ ಕರ್ನಾಟಕದ ಹಿರಿಯ ನಿವೃತ್ತ ಪೋಲಿಸ್ ಅಧಿಕಾರಿ ಶರಣ ಜ್ಯೋತಿ ಪ್ರಕಾಶ ಮಿರ್ಜಿಯರವರು ಕಲ್ಯಾಣ ಪರ್ವ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಬೆಳಗಲಿ ಬೆಳಗಲಿ ಬಸವಜ್ಯೋತಿ ಬೆಳಗಲಿ
ಬೆಳೆಸಲಿ ಬೆಳೆಸಲಿ ವಿಶ್ವ ಪ್ರೇಮ ಬೆಳೆಸಲಿ.
ಮೇಲು ಕೀಳೆಂಬ ಅಸಮತೆ ಅಳಿಯಲಿ
ಎಲ್ಲರೂ ಸಮವೆಂಬ ಸದ್ಭಾವ ಮೂಡಲಿ
ಬಲ್ಲಿದ ಬಡವ ಭೇದಭಾವ ತೊಲಗಲಿ
ಕ್ಷುಲ್ಲಕ ಬುದ್ಧಿಯ ಕತ್ತಲೆಯು ಹರಿಯಲಿ

ಎನ್ನುವ ಹಿನ್ನೆಲೆ ಗಾಯನದೊಂದಿಗೆ ಬಸವ ಜ್ಯೋತಿ ಪ್ರಜ್ವಲನೆಗೊಂಡು ಕಾರ್ಯಕ್ರಮಕ್ಕೆ ದಿವ್ಯ ಚಾಲನೆಯನ್ನು ನೀಡಿತು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮಾಜಿ ಸಹಕಾರ ಸಚಿವ ಶರಣ ಎಸ್.ಎಸ್. ಪಾಟೀಲರು ಮಾತನಾಡುತ್ತ ಈ ಕೆಳಗಿನ ವಿಚಾರಗಳನ್ನು ಹೇಳಿದರು

* ನನಗೆ ಪೂಜ್ಯ ಲಿಂಗಾನಂದ ಸ್ವಾಮೀಜಿಯವರಿಂದ ಲಿಂಗದೀಕ್ಷೆಯಾಗಿದೆ. ಅವರೇ ನನಗೆ ಲಿಂಗಪೂಜೆ ಮಾಡುವ ವಿಧಾನವನ್ನೂ ಕಲಿಸಿಕೊಟ್ಟಿದ್ದಾರೆ.
* ವಿಧಾನ ಸಭೆ, ವಿಧಾನ ಪರಿಷತ್ತು, ಲೋಕ ಸಭೆ, ರಾಜ್ಯ ಸಭೆಗಳು ಗುರು ಬಸವಣ್ಣನವರು ಕಟ್ಟಿ ತೋರಿದ ಅನುಭಾವ ಮಂಟಪಗಳಾಗಬೇಕಿತ್ತು, ದುರದೃಷ್ಟವಶಾತ್ ಅವುಗಳು [illegible] ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡಿವೆ ಎಂದರು.
* ಕೆಲವು ಮನುಷ್ಯರು ಪಶುವಿಗಿಂತ ಕಡೆಯಾಗಿ ವರ್ತಿಸುತ್ತ, ಅತ್ಯಾಚಾರದಂಥ ಹೇಯ ಕೃತ್ಯಗಳನ್ನು ಎಸಗುತ್ತಿದ್ದಾರೆ. ಪಾನ ನಿರೋಧ ಜಾರಿಗೆ ತಂದರೆ ಅತ್ಯಾಚಾರವನ್ನು ತಕ್ಕಮಟ್ಟಿಗೆ ತಡೆಗಟ್ಟಬಹುದು.
* ಬಲಿಕೊಡುವ ಪಶುವಿನಲ್ಲೂ ದೇವನಿದ್ದಾನೆ, ದೇವರ ಹೆಸರಿನಲ್ಲಿ ಪ್ರಾಣಿಗಳ ಬಲಿಕೊಡುವುದನ್ನು ನಿಲ್ಲಿಸಬೇಕು
* ಬಸವತತ್ವಕ್ಕೆ ಯಾವುದೇ ರೀತಿಯಲ್ಲಿ ಅಪಚಾರವಾಗುವಂಥ ಸಂದರ್ಭಗಳಲ್ಲಿ ಮೊದಲು ಮಾತಾಜಿಯವರು ಅದರ ವಿರುದ್ಧ ಧ್ವನಿ ಎತ್ತುತ್ತಾರೆ ಎಂದು ಮಾತಾಜಿಯರು ಮಾಡುವ ಕಾರ್ಯಗಳನ್ನು ಕೊಂಡಾಡಿದರು.

ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಮಾತನಾಡಿ, ಮಾತಾಜಿಯವರ ಸಾಧನೆ ನೋಡಲೆಂದು ಸಂತೋಷದಿಂದ ಭಾಗಿಯಾಗಿದ್ದೇನೆ. ಮಾತಾಜಿಯವರು ಸಮಾಜಕ್ಕೆ ವಿರುದ್ಧವಾದ ಕಾರ್ಯ ಮಾಡುತ್ತಿದ್ದಾರೆ ಎಂದು ನನಗೆ ತಪ್ಪಾಗಿ ಹೇಳಲಾಗಿತ್ತು. ಮಾತಾಜಿಯರ ಬಗ್ಗೆ ಮೊದಲು ನನಗೆ ಅಗೌರವವಿತ್ತು. ಕಲ್ಯಾಣ ಪರ್ವಕ್ಕೆ ಬಂದಮೇಲೆ ಮಾತಾಜಿಯವರ ಬಗ್ಗೆ ನನ್ನಲ್ಲಿ ಇದ್ದ ಎಲ್ಲಾ ತಪ್ಪು ತಿಳುವಳಿಕೆಗಳು ನಿವಾರಣೆಯಾಗಿ ಅವರ ಬಗ್ಗೆ ಅಪಾರವಾದ ಗೌರವ ತುಂಬಿಕೊಂಡಿದ್ದೇನೆ ಎಂದು ಹೇಳಿದರು. ಇಂದಿನ ಯುವ ಜನತೆ ಫೇಸ್ ಬುಕ್/ ವಾಟ್ಸ್ಯಾಪ್ ಗಳ ಮೂಲಕ ಹಾಳಾಗುವುದನ್ನು ಬಿಟ್ಟು ಮಾತಾಜಿಯವರ ಮಾರ್ಗದರ್ಶನದಲ್ಲಿ ನಡೆಯಬೇಕು. ರಾಜಕಾರಣದಲ್ಲಿ ನನ್ನ ಕೈಗಳು ಕೊಳಕಾಗಿವೆ ಅದಕ್ಕಾಗಿ ನಾನು ಇದುವರೆಗೂ ಇಷ್ಟಲಿಂಗ ಧರಿಸಿಲ್ಲ ಎಂದ ರೇಣುಕಾಚಾರ್ಯರ ಮಾತಿಗೆ, ಮಾತಾಜಿಯವರು ಟಾರ್ಚ್[illegible] ಹಾಕಿದಾಗ ಮಾತ್ರ ಕತ್ತಲೆ ಓಡಿಹೋಗುವಂತೆ ನೀವು ದೀಕ್ಷೆಯ ಮೂಲಕ ಇಷ್ಟಲಿಂಗ ಇಂದೇ ಧರಿಸಬೇಕು ಅದರಿಂದ ಕೊಳಕು ಮೆಲ್ಲಮೆಲ್ಲನೆ ತಾನಾಗಿಯೇ ತೊಳೆದುಹೋಗುತ್ತದೆ ಎಂದರು.

ಕಾನೂನು ವಿಶ್ವವಿದ್ಯಾಲಯದ ಮಾಜಿ ಕುಲಪತಿ ಶರಣ ಜಯಪಾಲರೆಡ್ಡಿ ಎಸ್ ಪಾಟೀಲ್ ಮಾತನಾಡುತ್ತ, ಪ್ರಪಂಚದ ಇತಿಹಾಸದಲ್ಲಿಒಂದೇ ನೆಲಗಟ್ಟಿನಲ್ಲಿ ಸುಮಾರು 800 ಜನ ಶರಣರು ಸಾವಿರಾರು ವಚನಗಳನ್ನು ರಚನೆಮಾಡಿರುವುದು ಗುರುಬಸವಣ್ಣನವರ ನೇತೃತ್ವದಲ್ಲಿ ಕಲ್ಯಾಣದಲ್ಲಿ ಮಾತ್ರ. ಲಿಂಗಾಯತ ಧರ್ಮ ಏಕದೇವೋಪಾಸನೆಯ ಧರ್ಮ. ಇಷ್ಟಲಿಂಗ ಪ್ರತಿಯೊಬ್ಬರ ವೈಯಕ್ತಿಕ ದೇವರು. ಇಷ್ಟಲಿಂಗದೀಕ್ಷೆ ಕೊಡುವ ಮೂಲಕ ಹೆಣ್ಣುಮಕ್ಕಳಿಗೂ ಸಮಾನತೆಯನ್ನು ಕೊಟ್ಟಿರುವುದು ಲಿಂಗಾಯತ ಧರ್ಮ ಮಾತ್ರ. ಸಂವಿಧಾನದ ಎಲ್ಲಾ ವಿಷಯಗಳು ಎಲ್ಲಾ ನಿಯಮಗಳು, ತತ್ವಗಳು ವಚನಸಾಹಿತ್ಯದಲ್ಲಿವೆ. 18ನೇ ಶತಮಾನವನ್ನು

Age of enlightenment (ಜ್ಞಾನೋದಯದ ಕಾಲ) ಎಂದು ಕರೆಯುತ್ತಾರೆ. ಆದರೆ ಎಲ್ಲಾ ರಂಗಗಳಲ್ಲಿಯೂ ಸುಧಾರಣೆ ತಂದು ಅತ್ಯದ್ಭುತ ಸಾಧನೆ ಮಾಡಿದ 12ನೇ ಶತಮಾನವು Real age of enlightenment (ನಿಜವಾದ ಜ್ಞಾನೋದಯದ ಕಾಲ). ಆರ್ಥಿಕ ಸೌಲಭ್ಯಕ್ಕಾಗಿ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ನಾವು ಕೇಳುತ್ತಿಲ್ಲ ಇದು ನಮ್ಮ ಆತ್ಮ ಗೌರವದ ಪ್ರಶ್ನೆ. ನಮ್ಮ ಆತ್ಮ ಗೌರವಕ್ಕಾಗಿ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಸಿಗಬೇಕು. ನಾವು ಒಳಜಾತಿ ಮತ್ತು ಒಳಜಗಳಗಳನ್ನು ಬಿಟ್ಟು ಒಟ್ಟಾಗಿ ಬದುಕಬೇಕು ಒಟ್ಟಾಗಿ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆಗಾಗಿ ಹೋರಾಡಬೇಕು. [illegible] ಲಿಂಗಾನಂದ ಅಪ್ಪಾಜಿಯವರನ್ನು ನೋಡಿಲ್ಲ ಎನ್ನುವ ದುಃಖವಿಲ್ಲ ಏಕೆಂದರೆ ಮಾತಾಜಿಯವರಲ್ಲಿ ಲಿಂಗಾನಂದ ಅಪ್ಪಾಜಿಯವರನ್ನು ಕಾಣುತ್ತೇನೆ ಎಂದರು.

ಶರಣ ಬಸವರಾಜ ದಿಂಡೂರು ಮಾತನಾಡುತ್ತ, ನಮ್ಮ ಅಪ್ಪ ಅಮ್ಮ ಲಿಂಗೈಕ್ಯರಾದಮೇಲೆ ಅವರ 2ಅಡಿಯ ಭಾವಚಿತ್ರ ಹಾಕಲಿಕ್ಕಾಗಿ ನನಗೆ ಎರಡು ವರ್ಷ ಬೇಕಾಯಿತು. ಆದರೆ ಮಾತಾಜಿ 108 ಅಡಿಯ ಅಪ್ಪ ಬಸವಣ್ಣನವರ ಮೂರ್ತಿ ನಿರ್ಮಾಣ ಮಾಡಿರುವುದು ನಿಜವಾಗಿಯೂ ಅಚ್ಚರಿ ಮತ್ತು ಅದ್ಭುತ. ಅಂದು ಗುರು ಬಸವಣ್ಣನವರು ಮತ್ತು ಇಂದು ಮಾತಾಜಿಯವರು ಸಮಾಜದ ಬಗ್ಗೆ ಕಳಕಳಿ ಹೊಂದಿ ಅದರ ಸರ್ವಾಂಗೀಣ ಏಳಿಗೆಗಾಗಿ ಶ್ರಮಿಸುತ್ತಿರುವುದು ಅದ್ಭುತವಾಗಿದೆ ಎಂದರು.

18-10-2014 ಸಂಜೆ 6-30ರ ಮಹಿಳಾ ಗೋಷ್ಠಿ.

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ ಪರಮ ಪೂಜ್ಯ ಜಗದ್ಗುರು ಗಂಗಾದೇವಿ ಮಾತಾಜಿಯವರು ಮಾತನಾಡುತ್ತ, 12ನೇ ಶತಮಾನದಲ್ಲಿ ಗುರುಬಸವಣ್ಣನವರು ಹೆಣ್ಣುಮಕ್ಕಳ ಭಾಗ್ಯದ ಬಾಗಿಲು ತೆರೆದರು. ಹೆಣ್ಣು ಮಕ್ಕಳು ಗುರುವಾಗಬಲ್ಲರು ಜಗದ್ಗುರುವಾಗಬಲ್ಲರೂ ಎಂದು ಹೆಣ್ಣು ಮಕ್ಕಳಿಗೂ ಗುರುತ್ವದ ಪಟ್ಟ ಕಟ್ಟಿದವರು ಗುರು ಬಸವಣ್ಣನವರು ಎಂದರು

ಅರವಿಂದಾಶ್ರಮಕ್ಕೆ ಶ್ರೀ ಮಾತೆಯವರು ಆಧಾರವಾದಂತೆ, ರಾಮಕೃಷ್ಣಾಶ್ರಮಕ್ಕೆ ಸ್ವಾಮಿ ವಿವೇಕಾನಂದರು ಆಧಾರವಾದಂತೆ, ಅನುಭವ ಮಂಟಪಕ್ಕೆ ಅಕ್ಕಮಹಾದೇವಿಯವರು ಬಂದಂತೆ ಬಸವ ಮಹಾಮನೆಗೆ ಪರಮ ಪೂಜ್ಯ ಡಾ. ಮಾತೆ ಮಹಾದೇವಿಯವರು ಕಾರಣ ಕರ್ತರು ಮತ್ತು ಆಧಾರ ಸ್ತಂಭವಾಗಿದ್ದಾರೆ ಎಂದರು.

ಗಡ್ಡ ಮೀಸೆ ಬಂದರೆ ಗಂಡೆಂಬರು
ಮೊಲೆ ಮೂಡಿ ಬಂದರೆ ಹೆಣ್ಣೆಂಬರು
ಒಳಗೆ ಸುಳಿವಾತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ ರಾಮನಾಥ.

ಎನ್ನುವ ಜೇಡರ ದಾಸಯ್ಯನವರ ವಚನದಂತೆ ಹೆಣ್ಣು ಪುರುಷನಿಗೆ ಸರಿಸಮಾನಳಾಗಿ ಸಾಧನೆ ಮಾಡಬಲ್ಲಳು. ಮೊನ್ನೆ ಬೆಂಗಳೂರಿನಿಂದ ಒಬ್ಬ ಹೆಣ್ಣುಮಗಳ ಹೃದಯವನ್ನು ತೆಗೆದುಕೊಂಡು ಹೋಗಿ ಚೆನ್ನೈನಲ್ಲಿ ಒಬ್ಬ ಪುರುಷನಿಗೆ ಜೋಡಿಸಿರುವುದನ್ನು ಮನಗಂಡಾಗ ಮೇಲಿನ ವಚನ ಇನ್ನೂ ಹೆಚ್ಚು ಅರ್ಥಪೂರ್ಣವಾಗಿ ಅರ್ಥವಾಗುತ್ತದೆ. ಹೃದಯಕ್ಕೂ ಹೆಣ್ಣು ಗಂಡು ಎಂಬ ಭೇದವಿಲ್ಲ ಎಂದರು. ಅಕ್ಕಮಹಾದೇವಿ ಹೆಣ್ಣುಮಕ್ಕಳ ಸಂಕುಲಕ್ಕೆ ಕಳಶಪ್ರಾಯವಾದ ಸಾಧನೆ ಮಾಡಿ ತೋರಿಸಿದ್ದಾರೆ. ಅವರ ಜೀವನ ಮತ್ತು ಸಂದೇಶಗಳನ್ನು ಇಂದಿನ ಹೆಣ್ಣುಮಕ್ಕಳು ಅನುಸರಿಸಬೇಕು ಎಂದರು.

ಉಪನ್ಯಾಸಕರಾಗಿ ಆಗಮಿಸಿದ ಶರಣೆ ಶಾಂತ ಅಪ್ಪಗಿ ಮಾತನಾಡುತ್ತ ಒಳಗಿನ

ಜ್ಞಾನ ಹೆಣ್ಣೂ ಅಲ್ಲ ಗಂಡೂ ಅಲ್ಲ. ಪುರುಷರು ಗಳಿಸುವಂಥ ಯಾವುದೇ ಉನ್ನತಮಟ್ಟದ ಜ್ಞಾನವನ್ನು ಮಹಿಳೆಯೂ ಗಳಿಸಿದ್ದಾಳೆ. ಮಹಿಳೆಯಲ್ಲಿ ಪುರುಷರಿಗಿಂತ ಅದ್ಭುತವಾದ ಶಕ್ತಿ ಇದೆ. ಸೃಷ್ಟಿಯನ್ನು ಮುಂದುವರೆಸುವ ಕಾರ್ಯವನ್ನು ಹೆಣ್ಣುಮಾತ್ರ ಮಾಡಬಲ್ಲಳು. ತನ್ನ ಮನೆ ಕೆಲಸಗಳನ್ನು ನಿರ್ವಹಿಸುತ್ತ, ಕೌಟುಂಬಿಕ ಜವಾಬ್ದಾರಿಗಳೊಂದಿಗೆ, ಹೊರಗಡೆ ಹೋಗಿ ಕಾಯಕ ಮಾಡುವ ಮಹಿಳೆ ನಿಜವಾಗಿಯೂ ಧೀರಳು ಮತ್ತು ಸಾಹಸಿ. ಹನ್ನೆರಡನೇ ಶತಮಾನದಲ್ಲಿ ಸಣ್ಣ ಸಣ್ಣ ಕುಟುಂಬ ಹಾಗು ಕಾಯಕಗಳಿಂದ ಬಂದ ಅನೇಕ ಮಹಿಳೆಯರು ಶರಣೆಯರಾಗಿ ವಚನಗಳನ್ನು ಬರೆದಿದ್ದಾರೆ. ಅವರ ಒಂದೊಂದು ವಚನಗಳು ಮದ್ದು ಗುಂಡುಗಳಿದ್ದಂತೆ ನೇರವಾಗಿ ಸಮಾಜದಲ್ಲಿನ ವೈಷಮ್ಯತೆಗಳನ್ನು ಪ್ರಶ್ನಿಸುತ್ತವೆ.

ಲಂಚ ವಂಚನೆಗೆ ಕೈಯಾನದ ಭಾಷೆ !
ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ,
ಕೈ ಮುಟ್ಟಿ ಎತ್ತಿದೆನಾದರೆ, ಅಯ್ಯಾ ನಿಮ್ಮಾಣೆ
ನೀವಿಕ್ಕಿದ ಭಿಕ್ಷೆಯೊಳಗಿಪ್ಪೆನಯ್ಯ!
ಶಂಭು ಜಕ್ಕೇಶ್ವರ ನಿಮ್ಮಾಣೆ"

ಎನ್ನುವ ಕಸ ಗುಡಿಸುವ ಸತ್ಯಕ್ಕನ ವಚನ ಪ್ರತಿಯೊಬ್ಬ ಸರಕಾರಿ ನೌಕರ/ಅಧಿಕಾರಿ ಅಳವಡಿಸಿಕೊಂಡರೆ ದೇಶವು ಲಂಚ ಮುಕ್ತವಾಗುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಶರಣೆ ಇಂದುಮತಿ ದಿವಾಕರ ಕೂಡ ಮಾತನಾಡಿದರು. ಬೀದರಿನ ಶರಣೆ ಶಕುಂತಲಾ ಬೆಲ್ದಾಳೆ. ಶರಣೆ ಶಕುಂತಲಾ ವಾಲಿ ಇವರನ್ನು ಸತ್ಕರಿಸಲಾಯಿತು.

ದಿನಾಂಕ 19-10-2014 ಶರಣ ವಂದನೆ ಮತ್ತು
2ನೇ ದಿನದ ಧರ್ಮ ಚಿಂತನ ಗೋಷ್ಠಿ.

ಪರಮ ಪೂಜ್ಯ ಗಂಗಾದೇವಿ ಮಾತಾಜಿಯವರನ್ನೊಳಗೊಂಡು ಬಸವಧರ್ಮ ಪೀಠದ ಪೂಜ್ಯರು ಬೆಳಿಗ್ಗೆ 8-00 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಮತ್ತು ಗುರು ಬಸವಾರ್ಚನೆಯೊಂದಿಗೆ ಶರಣವಂದನೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಬಳಿಕ ಮಾತನಾಡಿದ ಪೂಜ್ಯ ಗಂಗಾದೇವಿ ಮಾತಾಜಿಯವರು, ಶರಣರನ್ನು ನಮ್ಮ ಹೃದಯಕಮಲಕ್ಕೆ ಆಹ್ವಾನಿಸುತ್ತಿದ್ದೇವೇನೊ ಎನ್ನುವ ಭಕ್ತಿ ಭಾವನೆ ಶರಣ ವಂದನೆಯಲ್ಲಿ ತುಂಬಿತ್ತು. ಕೂಡಲ ಸಂಗಮದಲ್ಲಿ ವಚನ ಪಠಣ ಮತ್ತು ಬಸವಕಲ್ಯಾಣದಲ್ಲಿ ಶರಣವಂದನೆ ಅತ್ಯಂತ ಪ್ರಮುಖವಾದವುಗಳು. ಮೊದಲ ಕಲ್ಯಾಣ ಪರ್ವದಲ್ಲಿ ಶರಣ ವಂದನೆ ಮಾಡುವಾಗ ಎಲ್ಲಾ ಶರಣ ಕಿರಣಗಳು ಭೂಮಿಗೆ ಬರುತ್ತಿವೆ ಎನ್ನುವಂತೆ ಅನುಭವವಾಯಿತು ಎಂದು ತಮ್ಮ ಮೊದಲ ಕಲ್ಯಾಣ ಪರ್ವದ ಅನುಭವವನ್ನು ಹಂಚಿಕೊಂಡರು.

ಶರಣ ನಾಗೇಂದ್ರರವರು ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯರನ್ನು ಮತ್ತು ಸರ್ವ ಶರಣರನ್ನು ಸ್ವಾಗತಿಸಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಶರಣ ಸಿ.ಎಂ. ಇಬ್ರಾಹಿಂರವರು ತಮ್ಮ ಭಾಷಣದುದ್ದಕ್ಕೂ ಅನೇಕ ವಚನಗಳನ್ನು ಹೇಳುತ್ತ ಮುಖ್ಯವಾಗಿ ಈ ಕೆಳಗಿನ ವಿಚಾರಗಳನ್ನು ತಿಳಿಸಿದರು.

* ಇಂದಿನ ಕಾಲದಲ್ಲಿ ಚಮತ್ಕಾರವಿರುವ ಕಡೆ ನಮಸ್ಕಾರವಿರುತ್ತದೆ. ಮಾತಾಜಿಯವರು ಗುರು ಬಸವಣ್ಣನವರ ೧೦೮ಅಡಿ ಮೂರ್ತಿ ಸ್ಥಾಪನೆ ಮಾಡಿ ಚಮತ್ಕಾರ ಮಾಡಿದ್ದಾರೆ ಅದಕ್ಕಾಗಿ ಅವರಿಗೆ ನನ್ನ ನಮಸ್ಕಾರಗಳು.

* ಈ ದಿವ್ಯವಾದ ಮತ್ತು ಭವ್ಯವಾದ ಗುರು ಬಸವಣ್ಣನವರ ಮೂರ್ತಿ ನೋಡಿ ನನ್ನ ಕರುಳು ತಣ್ಣಗಾಗಿದೆ (ಆತ್ಮ ತೃಪ್ತಿಯಾಗಿದೆ)

* ಮಾತಾಜಿಯವರು ರಾಜ ಕಾರಣಿಗಳನ್ನು ಓಲೈಸದೆ ಸತ್ಯದ ಮಾರ್ಗದಲ್ಲಿ ನಡೆಯುವ ಖಡಕ್ ಗುರುಗಳಾಗಿದ್ದಾರೆ.

* ನಾನು ವಿಧಾನಸಭೆಯಲ್ಲೆಲ್ಲಾ ವಚನಗಳನ್ನು ಹೇಳುವಾಗ ನನಗೆ ಅನೇಕರು ನೀವು ಲಿಂಗಾಯತರ ಪರವಾಗಿ ಇದ್ದಿದ್ದಿರಾ ಎನ್ನುತ್ತಾರೆ, ಅವರಿಗೆ ನಾನು ಯಾವುದೇ ಜನಾಂಗದ ಪರವಾಗಿ ಇಲ್ಲ ನಾನು ಬಸವ ತತ್ವದ ಪರವಾಗಿ ಇದ್ದೇನೆ ಎಂದು ಹೇಳಿದ್ದೇನೆ.

*ಸಂನ್ಯಾಸಿಯಾದವರು ಧ್ಯಾನ, ಅಧ್ಯಯನ ಮತ್ತು ಭಕ್ತರು ತಪ್ಪು ಮಾಡಿದಾಗ ಅವರನ್ನು ತಿದ್ದುವ ಕಾರ್ಯ ಮಾಡಬೇಕು. ಇದನ್ನು ಮಾತಾಜಿಯವರು ಅತ್ಯಂತ ಪ್ರಾಮಾಣಿಕವಾಗಿ ಮಾಡುತ್ತಿದ್ದಾರೆ.

* ಕೇವಲ ನಮ್ಮ ಚಿಂತೆ ನಾವು ಮಾಡದೇ ನೊಂದವರ ನಿರ್ಗತಿಕರ ಚಿಂತೆ ಮಾಡಿದರೆ ದೇವರು ನಮ್ಮ ಚಿಂತೆ ಮಾಡುತ್ತಾನೆ.

*ಕರ್ನಾಟಕಕ್ಕೆ ಲಿಂಗಾಯತ ಧರ್ಮದ ಕೊಡುಗೆ ಅನನ್ಯವಾಗಿದೆ ಅದರಲ್ಲೂ ಅನೇಕರನ್ನು ವಿದ್ಯಾವಂತರನ್ನಾಗಿ ಮಾಡಿ ಶಿಕ್ಷಣ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದೆ. ನಾನೂ ಲಿಂಗಾಯದ ಧರ್ಮದ ಮಠಗಳಲ್ಲೇ ಓದಿದ್ದೇನೆ. ಲಿಂಗಾಯತ ಧರ್ಮದ ಮಠಗಳು ಇಲ್ಲದೇ ಹೋಗಿದ್ದರೆ ಕರ್ನಾಟಕದಲ್ಲಿ 80% ಅನಕ್ಷರತೆ ಇರುತಿತ್ತು. * ಇತರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಹೆಚ್ಚು ಹಿಂಸೆ ಮತ್ತು ಗಲಭೆಗಳಾಗದೇ ಇರುವುದಕ್ಕೆ ಲಿಂಗಾಯತ ಧರ್ಮವೇ ಕಾರಣ.

* ಭಾರತದ ಭಕ್ತಿ ಪರಂಪರೆ ಬಹಳ ವಿಶಾಲವಾದುದು. ಓಮನ್ ಮತ್ತು ಮಸ್ಕತ್ ದೇಶಗಳಲ್ಲಿಯೂ ಶಿವದೇವಾಲಯಗಳಿವೆ.

* ಗುರು ಬಸವಣ್ಣನವರ ಕ್ರಾಂತಿಯ ಮೂಲ ಸಾಧನ ದೇವರ ಬಗೆಗಿನ ಅನನ್ಯ ಭಕ್ತಿ ಮತ್ತು ಅವರ ಭಕ್ತಿಯ ತರಂಗಗಳು ಇಂದಿನ ಮೊಬೈಲ ಫೋನ್ ತರಂಗಗಳಿಗಿಂತ ವೇಗವಾಗಿದ್ದವು. ಅದಕ್ಕಾಗಿಯೇ ಈ ಕಲ್ಯಾಣ ಪರ್ವಕ್ಕೆ ಬಂದ ಅತಿಥಿಗಳಾಗಲೀ ಶರಣರಾಗಲೀ ಯಾರು ಆಸೆಯಿಂದ ಬಂದಿಲ್ಲ ಭಕ್ತಿಯಿಂದ ಬಂದಿದ್ದಾರೆ.

* ಹೀಗೆಯೇ ಮಾತನಾಡುತ್ತಾ ಹೋದರೆ ನನ್ನ ವಯಸ್ಸು ಮುಗಿಯಬಹುದು ಆದರೆ ಗುರು ಬಸವಣ್ಣನವರ ಗುಣಗಾನ ಮುಗಿಯುವುದಿಲ್ಲ.

ಪ್ರಾಸ್ತಾವಿಕವಾಗಿ ಮಾತನಾಡಿದ ಮಾತಾಜಿ, ಕಲ್ಯಾಣವೇ ಪ್ರಣತೆಯಾಯಿತು, ಇಲ್ಲಿ ಭಕ್ತಿರಸವೇ ತೈಲವಾಯಿತು ಸದಾಚಾರದ ಬತ್ತಿಗೆ ಬಸವಣ್ಣನವರೆಂಬ ಜ್ಯೋತಿ ಮುಟ್ಟಲು ಇಲ್ಲಿ ದೈವೀ ಪ್ರಕಾಶವು ಚೆಲ್ಲವರಿಯಿತು. ಈ ನೆಲದಲ್ಲಿ ಅದ್ಭುತವಾದ ವಚನ ಸಾಹಿತ್ಯ ರಚನೆಯಾಯಿತು. ಅಳಿಯದೇ ಉಳಿದಿರುವ ಪರಮಜ್ಞಾನದ ಆಸ್ತಿ ವಚನಸಾಹಿತ್ಯ. ಅದಕ್ಕಾಗಿ ಪ್ರತಿಯೊಬ್ಬರೂ ದಿನಕ್ಕೆ ಐದು ವಚನಗಳನ್ನು ಓದದೇ ಹೊರಹೋಗುವುದಿಲ್ಲ ಎನ್ನುವ ನಿಯಮ ಹಾಕಿಕೊಂಡು ವಚನ ಸಾಹಿತ್ಯವನ್ನು ಅಧ್ಯಯನ ಮಾಡುತ್ತ ಹೋಗಬೇಕು. ಕಲ್ಯಾಣ ಕ್ರಾಂತಿ ಸಂದರ್ಭದಲ್ಲಿ ವಚನಸಾಹಿತ್ಯ ರಕ್ಷಣೆ ಮಾಡಲು ಅನೇಕರು ತಮ್ಮ ಪ್ರಾಣ ಬಲಿದಾನ ಮಾಡಿದ್ದಾರೆ. ಅದರಲ್ಲೂ ಮಡಿವಾಳ ಮಾಚಿದೇವರ ಧೈರ್ಯದಿಂದ ಮತ್ತು ಅವರ ಸ್ಥೈರ್ಯದಿಂದ ವಚನ ಸಾಹಿತ್ಯ ಉಳಿಯಿತು ಎಂದು ಹೇಳುತ್ತ ಮಡಿವಾಳ ಮಾಚಿದೇವರನ್ನು ನೆನೆದು ಮಾತಾಜಿಯವರು

ಗದ್ಗದಿತರಾದರು. ಹೆಣ್ಣು-ಹೊನ್ನು-ಮಣ್ಣುಗಳ ಗಳಿಕೆ ಮತ್ತು ಬಳಕೆಗಾಗಿ ಕಲ್ಯಾಣ ಕ್ರಾಂತಿನಡೆಯಲಿಲ್ಲ. ಸಮಾನತೆಗಾಗಿ ಕ್ರಾಂತಿನಡೆಯಿತು. ಸಚಿವನ ಸ್ಥಾನ ಮಾನ ಮತ್ತು ಚಮ್ಮಾರನ ಸ್ಥಾನಮಾನಗಳು ಸರಿಸಮವಾದವುಗಳು ಎಂದು ಸಾರುವುದಕ್ಕಾಗಿ ಕಲ್ಯಾಣ ಕ್ರಾಂತಿ ನಡೆಯಿತು. ಇದನ್ನು ತಾವೆಲ್ಲರೂ ಅರ್ಥ ಮಾಡಿಕೊಂಡು. ರಾಷ್ಟ್ರೀಯ ಬಸವದಳಗಳನ್ನು ಸಂಘಟಿಸಿ, ಪ್ರತಿಯೊಂದು ಊರಿಗೂ ಬಸವ ಮಂಟಪಗಳನ್ನು ನಿರ್ಮಿಸಿಕೊಂಡು ಪ್ರಾರ್ಥನೆಯನ್ನು ನಡೆಸಿಕೊಂಡು ಹೋಗಿ ಎಂದು ಮಾತಾಜಿ ತಿಳಿಸಿದರು.

ಕರ್ನಾಟಕದ ಸಮಾಜ ಕಲ್ಯಾಣ ಸಚಿವರಾದ ಎಚ್. ಆಂಜನೇಯರವರು ಮಾತನಾಡಿ ಈ ಕೆಳಗಿನ ವಿಷಯಗಳನ್ನು ಪ್ರಸ್ತಾಪಿಸಿದರು.

* ಗುರು ಬಸವಣ್ಣನವರು ಮೊಟ್ಟ ಮೊದಲಬಾರಿಗೆ ಸಮಾಜದ ಕಟ್ಟಕಡೇ ವ್ಯಕಿಗೂ ಸಮಾನತೆಯನ್ನು ನೀಡಿದ್ದರು. ಮಾನವೀಯ ನೆಲೆಗಟ್ಟಿನಲ್ಲಿ ಎಲ್ಲರಿಗೂ ಧರ್ಮ ಸಮಾನತೆಯನ್ನು ತಂದುಕೊಟ್ಟರು. ಅತ್ಯಂತ ಕೀಳು ಎಂದು ಭಾವಿಸಿದ್ದ ಮಾದಿಗ ಜನಾಂಗದವನಾದ ನಾನು ಇಲ್ಲಿ ಮಾತನಾಡಬೇಕಾದರೆ ಗುರು ಬಸವಣ್ಣನವರೇ ಕಾರಣ. ಗುರು ಬಸವಣ್ಣನವರಿಗೆ ನಮ್ಮ ದೇಶದಲ್ಲಿ ಎಷ್ಟು ಗೌರವ ಸಲ್ಲಿಸಬೇಕಿತ್ತೋ ಅಷ್ಟು ಸಲ್ಲುತ್ತಿಲ್ಲ.

* ಭಾರತ ದೇಶದಲ್ಲಿ ಮಹಿಳೆಯೊಬ್ಬರು ಜಗದ್ಗುರುವಾಗಿ ಮಾತಾಜಿಯವರಷ್ಟು ಸಾಧನೆ ಮಾಡಿರುವ ಬೇರೆ ಉದಾಹರಣೆಯಿಲ್ಲ. ಧರ್ಮವನ್ನು ಎತ್ತಿಹಿಡಿಯುವಲ್ಲಿ ಮಾತಾಜಿ ವೀರ ಸನ್ಯಾಸಿಯಾಗಿದ್ದಾರೆ. ನಾನೂ ಮಾತಾಜಿಯವರು ಹುಟ್ಟಿದ ಚಿತ್ರದುರ್ಗ ಜಿಲ್ಲೆಯವನು. ಹೀಗಾಗಿ ಮಾತಾಜಿಯವರ ಬಗ್ಗೆ ಅಪಾರವಾದ ಗೌರವ ಹೊಂದಿದ್ದೇನೆ.

* ಗುರು ಬಸವಣ್ಣನವರು ನೀಡಿದ ಲಿಂಗಾಯತ ಧರ್ಮ ಕೆಳವರ್ಗದವರ ಧರ್ಮ. ಆರ್ಥಿಕವಾಗಿ ಸಾಮಾಜಿಕವಾಗಿ ಧಾರ್ಮಿಕವಾಗಿ ಕೆಳವರ್ಗದವರ ಬಗ್ಗೆ ಕಳಕಳಿ ಮತ್ತು ಕನಿಕರ ತೋರಿದ ಧರ್ಮ. ಅದಕ್ಕಾಗಿಯೇ ನಾನು ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವಾಗ ಗುರು ಬಸವಣ್ಣನವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ್ದೇನೆ. ನನ್ನ ಮನೆಯಲ್ಲಿ ಮತ್ತು ಕಛೇರಿಯಲ್ಲಿ ಗುರುಬಸವಣ್ಣನವರ ಹೊರತು ಪಡಿಸಿ ಬೇರೆ ಯಾವುದೇ ಫೋಟೋಗಳಿಲ್ಲ. ಗುರು ಬಸವಣ್ಣನವರಿಗೆ ನಮಸ್ಕರಿಸದೇ ನಾನೂ ಎಂದೂ ಮನೆಯಿಂದ ಹೊರಹೋದವನಲ್ಲ. ಎಂದು ಸಚಿವರು ಗುರು ಬಸವಣ್ಣನವರ ಬಗ್ಗೆ, ಲಿಂಗಾಯತ ಧರ್ಮದ ಬಗ್ಗೆ ಮತ್ತು ಮಾತಾಜಿಯವರ ಬಗ್ಗೆ ಅತ್ಯಂತ ಭಕ್ತಿ ಹಾಗು ಗೌರವಗಳಿಂದ ಮಾತನಾಡಿದರು.

ತೆಲಂಗಾಣ ರಾಜ್ಯದ ಜಹಿರಾಬಾದಿನ ಸಂಸದರಾದ ಶರಣ ಬಿ.ಬಿ. ಪಾಟೀಲರು ಮಾತಾಜಿಯವರಿಗೆ ಬೃಹತ್ ಮಾಲಾರ್ಪಣೆ ಮಾಡಿ ಹಿಂದಿಯಲ್ಲಿ ಮಾತನಾಡಿದರು. ನಾವೆಲ್ಲ ಒಟ್ಟಾಗಿ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆಗಾಗಿ ಹೋರಾಡಬೇಕಿದೆ. ತೆಲಂಗಾಣದಲ್ಲಿ ೯ ಜನ ಸಂಸದರಿದ್ದಾರೆ ಅವರೆಲ್ಲರ ಮೂಲಕವಾಗಿ ನಾನು ಈ ಕಾರ್ಯಕ್ಕಾಗಿ ಶ್ರಮಿಸುತ್ತೇನೆ. ಕಲ್ಯಾಣ ಪರ್ವಕ್ಕೆ ಬಂದ ಮೇಲೆ ನಾನು ಲಿಂಗಾಯತನಾಗಿ ಹುಟ್ಟಿರುವುದಕ್ಕಾಗಿ ಹೆಮ್ಮೆ ಎನಿಸುತ್ತಿದೆ ಎಂದರು.

ದಿನಾಂಕ ೧೯-೧೦-೨೦೧೪ ಸಂಜೆ ೬-೦೦ ಗಂಟೆಯ ೨ನೇ ಧರ್ಮ ಚಿಂತನ ಗೋಷ್ಠಿ ಪ್ರತಿನಿತ್ಯದ ನೆನಹು ಸಂಕ್ಷಿಪ್ತ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಪ್ರಾರ್ಥನೆಯ ಬಳಿಕ ನೇರವಾಗಿ ಮಾತಾಜಿಯವರ ಪ್ರವಚನದ ಧಾರೆ ಅಲೆಅಲೆಯಾಗಿ ತೇಲಿ ಬಂತು.

ಕಣ್ಗೆ ಶೃಂಗಾರ ಗುರುಹಿರಿಯರ ನೋಡುವುದು.

ಕರ್ಣಕ್ಕೆ ಶೃಂಗಾರ ಪುರಾತರ ಸುಗೀತಂಗಳ ಕೇಳುವುದು.
ವಚನಕ್ಕೆ ಶೃಂಗಾರ ಸತ್ಯವ ನುಡಿವುದು.
ಸಂಭಾಷಣೆಗೆ ಶೃಂಗಾರ ಸದ್ಭಕ್ತರ ನುಡಿಗಡಣ.
ಕರಕ್ಕೆ ಶೃಂಗಾರ ಸತ್ಪಾತ್ರಕ್ಕೀವುದು.
ಜೀವಿಸುವ ಜೀವನಕ್ಕೆ ಶೃಂಗಾರ ಗಣಮೇಳಾಪ-
ಇವಿಲ್ಲದ ಜೀವಿಯ ಬಾಳುವೆ ಏತಕ್ಕೆ ಬಾತೆಯಯ್ಯಾ
ಚನ್ನಮಲ್ಲಿಕಾರ್ಜುನದೇವರ ದೇವಾ.

ಕಲ್ಯಾಣ ಪರ್ವ ಮತ್ತು ಶರಣಮೇಳಗಳಲ್ಲಿ ಕಡ್ಡಾಯವಾಗಿ ಪ್ರತಿಯೊಬ್ಬರೂ ಭಾಗವಹಿಸಬೇಕು. ಇಲ್ಲಿ ಗುರು ಹಿರಿಯರನ್ನು ನೋಡಿ ಕಣ್ಣಿಗೆ ಶೃಂಗಾರ ಮಾಡಿಕೊಳ್ಳಬಹುದು. ಗುರುಬಸವಣ್ಣನವರ ಹಾಗು ಆದಿಶರಣರ(ಪುರಾತರ) ವಚನಗಳನ್ನು ಕೇಳಿ ನಮ್ಮ ಕಿವಿ ಶುದ್ಧಿ ಮತ್ತು ಶೃಂಗಾರ ಮಾಡಿಕೊಳ್ಳಬಹುದು. ಸದ್ಭಕ್ತರೊಡನೆ ಸಂಭಾಷಣೆ ಮಾಡಿ ನಮ್ಮ ನುಡಿಯನ್ನು ಶುದ್ಧಿ ಮಾಡಿಕೊಳ್ಳಬಹುದು. ಅಕ್ಕ ಹೇಳುವಂತೆ ಇಂಥ ಗಣ ಮೇಳಾಪಗಳಲ್ಲಿ ಭಾಗಿಯಾಗಿ ನಮ್ಮ ಜೀವನವನ್ನೇ ಆನಂದಮಯವಾಗಿ ಮಾಡಿಕೊಳ್ಳಬೇಕು. ಶರಣ ಮೇಳ, ಕಲ್ಯಾಣ ಪರ್ವಗಳು ಸರ್ವೀಸ್ ಸ್ಟೇಷನ್‌ಗಳಿದ್ದ ಹಾಗೆ. ಗ್ಯಾರೇಜ್‌ಗಳಲ್ಲಿ ವಾಹನಗಳನ್ನು ಶುದ್ಧವಾಗಿ ತೊಳೆದು, ಸುಟ್ಟುಹೋದ ಗ್ರೀಸ್ ಮತ್ತು ಆಯಿಲ್‌ಗಳನ್ನು ತೆಗೆದುಹಾಕಿ, ಹೊಸ ಗ್ರೀಸ್ ಮತ್ತು ಆಯಿಲ್‌ಗಳನ್ನು ಹಾಕುತ್ತಾರೆ. ಅಲ್ಲಲ್ಲೇ ಆಗಿರುವ ಅಂಕು ಡೊಂಕು ಸರಿಮಾಡಿ ವಾಹನಕ್ಕೆ ಪಾಲಿಷ್ ಮಾಡಿಕೊಟ್ಟಾಗ ವಾಹನವು ಸರಾಗವಾಗಿ ನಡೆಯುತ್ತದೆ.

ಅದೇರೀತಿ ಕಲ್ಯಾಣ ಪರ್ವ ಮತ್ತು ಶರಣಮೇಳಗಳಲ್ಲಿ ಮನಸ್ಸಿಗೆ ಅಂಟಿರುವ ಅನೇಕ ಕಲ್ಮಷಗಳನ್ನು ಭಕ್ತಿಯ ಜಲದಲ್ಲಿ ತೊಳೆದು, ಕೆಟ್ಟುಹೋದ ಅನೇಕ ಆಚರಣೆಗಳನ್ನು ತೊಡೆದುಹಾಕಿ ಸದ್ಭಕ್ತಿ ಸದಾಚಾರಗಳನ್ನು ಅಳವಡಿಸಲಾಗುತ್ತದೆ. ಪ್ರಾರ್ಥನೆ ಪ್ರವಚನಗಳ ಪಾಲಿಷ್ ಮಾಡಿದಾಗ ನಿಮ್ಮ ಜೀವನ ಮತ್ತೆ ಸುಂದರ ಬಂಧುರವಾಗಿ ಧರ್ಮ ಮಾರ್ಗದಲ್ಲಿ ನಡೆಯುತ್ತದೆ. ಹೀಗಾಗಿ ಶರಣ ಮೇಳ ಮತ್ತು ಕಲ್ಯಾಣ ಪರ್ವಗಳು ನಿಮ್ಮೆಲರಿಗೂ ಕಡ್ಡಾಯವಾದ ಕಾರ್ಯಕ್ರಮಗಳು. ಇನ್ನೂ ಮಹಾರಾಷ್ಟ್ರದ ಅಲ್ಲಮ ಗಿರಿಯ ಗಣಮೇಳ, ಬೆಂಗಳೂರು ಬಸವಗಂಗೋತ್ರಿಯ ಬಸವೋತ್ಸವ, ಧಾರವಾಡದ ಅಕ್ಕಮಹಾದೇವಿ ಅನುಭಾವ ಪೀಠದ ಶರಣೋತ್ಸವ ಕಾರ್ಯಕ್ರಮಗಳು ತಮಗೆ ಐಚ್ಛಿಕವಾದ ಕಾರ್ಯಕ್ರಮಗಳು. ಅನುಕೂಲವಾದವರು ಬರಬಹುದು. ಸ್ಥಳೀಯರು ಬಂದು ಭಾಗವಹಿಸಿದರೆ ಸಾಕು.

ನಂತರ ಬೆಂಗಳೂರಿನ ಹೆಳವ ಸಮಾಜದ ಅಧ್ಯಕ್ಷರಾದ ಶರಣ ಈ ಕೃಷ್ಣಪ್ಪ ಮಾತನಾಡಿ ನಾನು ನವೀಕರಣಗೊಳಿಸಿದ ಮನೆಯಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆಯನ್ನು ಇಟ್ಟುಕೊಂಡು ಅನೇಕ ರಾಜಕೀಯ ವ್ಯಕ್ತಿಗಳನ್ನು ಕರೆದಿದ್ದೆ. ಹೋಮ ಹವನ ಮಾಡದೆ ಗುರು ಲಿಂಗ ಜಂಗಮರ ಪೂಜೆ ಮಾಡಿ ಗುರು ಪ್ರವೇಶ ಮಾಡಿರುವುದನ್ನು ನೋಡಿ ಅವರೆಲ್ಲರೂ ಅಚ್ಚರಿಗೊಂಡರು. ನನ್ನಂಥ ಸಾಮಾನ್ಯನಿಗೂ ಬಸವತತ್ವ ಅರ್ಥವಾಗುತ್ತದೆ. ಆದರೆ ಕೆಲವು ಮಠಾಧೀಶರು ಮಾಡುವ ಅನಿಷ್ಠ ಆಚರಣೆಗಳನ್ನು ನೋಡಿದಾಗ ಅವರಿಂದ ಇಷ್ಟಲಿಂಗವನ್ನು ಕಸಿದುಕೊಳ್ಳಬೇಕು ಎನ್ನುವಷ್ಟು ಕೋಪ ಬರುತ್ತದೆ ಎಂದು ಮಾತನಾಡಿದರು.

ಶರಣ ದೇಶಪಾಂಡೆಯವರು ಮಾತನಾಡಿ, ಜಗತ್ತಿನಲ್ಲಿ ನನ್ನ ಪ್ರಕಾರ ಎರಡೇ ಜಾತಿಗಳು ಒಂದು ಭವದ ಕಡೆಗೆ ಹೋಗುವ ಜಾತಿ ಇನ್ನೊಂದು ಶಿವನ ಕಡೆಗೆ ಹೋಗುವ

ಜಾತಿ. ಮಾತಾಜಿಯವರು ಶಿವನ ಕಡೆಗೆ ಹೋಗುವ ಶರಣರನ್ನು ತಯಾರು ಮಾಡುತ್ತಿದ್ದಾರೆ ಎಂದು ನುಡಿದರು.

20-10-2014 ಬೆಳಿಗ್ಗೆ 11-30 ಶೂನ್ಯ ಪೀಠಾರೋಹಣ ಮತ್ತು ಸಂದೇಶ

. ಬಿಜ್ಜಳನ ಚಕ್ರಾಧಿಪತ್ಯದ ಚಾಲುಕ್ಯ ರಾಜ್ಯದ ಬಸವಕಲ್ಯಾಣದಲ್ಲಿ ಗುರು ಬಸವಣ್ಣನವರು ಕುಳಿತು ಜನ ಸಂದರ್ಶನ ಮಾಡಿ, ಪ್ರಜೆಗಳ ಕಷ್ಟಕಾರ್ಪಣ್ಯಗಳನ್ನು ಕೇಳಿ ಅವರಿಗೆ ಪರಿಹಾರ ನೀಡುತ್ತಿದ್ದ ಸ್ಥಳವೇ ಪರುಷ ಕಟ್ಟೆ. ಈ ಐತಿಹಾಸಿಕ ಸ್ಥಳವನ್ನು ಇಂದಿಗೂ ಕಾಯ್ದುಕೊಂಡು ಬರಲಾಗಿದೆ. ಈ ಪರುಷಕಟ್ಟೆಯ ಮೇಲೆ ಗುರು ಬಸವಣ್ಣನವರಿಗೆ ಪೂಜೆಯನ್ನು ಸಲ್ಲಿಸಿ, ಜ್ಯೋತಿಯನ್ನು ಹೊತ್ತಿಸಿಕೊಂಡು ಆ ಜ್ಯೋತಿಯಿಂದ ಪೀಠಾರೋಹಣ ಕಾರ್ಯಕ್ರಮವನ್ನು ಉದ್ಘಾಟಿಸುವುದು ಕಲ್ಯಾಣಪರ್ವದ ಮತ್ತೊಂದು ಪ್ರಮುಖ ಆಚರಣೆ.

ಪರುಷ ಕಟ್ಟೆಯ ಮೇಲೆ ಗುರು ಬಸವಣ್ಣನವರ ಮೂರ್ತಿಯನ್ನಿಟ್ಟು ಪೂಜೆ ಸಲ್ಲಿಸಿ ಜ್ಯೋತಿಯನ್ನು ಹೊತಿಸಿಕೊಂಡು ಮಹಾಮನೆಯೆಡೆಗೆ ಹೊರಟ ಪೂಜ್ಯ ಗಂಗಾ ಮಾತಾಜಿಯವರನ್ನು ಬಸವ ಕಲ್ಯಾಣದ ಅನೇಕ ಸ್ಥಳೀಯ ಶರಣ ಶರಣೆಯರು ಪಾದಕ್ಕೆ ನೀರೆರೆದು ಆರತಿಯನ್ನು ಬೆಳಗಿ ಸ್ವಾಗತಿಸಿದರು. ಆ ಜ್ಯೋತಿಯನ್ನು ಹಿಡಿದು ಕಾರ್ಯಕ್ರಮದ ವೇದಿಕೆಗೆ ಪೂಜ್ಯ ಗಂಗಾಮಾತಾಜಿ ಆಗಮಿಸಿದರು. ಪೀಠಾರೋಹಣ ಮಾಡಲಿರುವ ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮೀಜಿಯವರನ್ನು ಹಲವಾರು ಜನ ಶರಣರು ಸ್ವಾಗತ ಮಾಡಿ ವೇದಿಕೆಗೆ ಕರೆತಂದರು. ಪರುಷಕಟ್ಟೆಯ ಜ್ಯೋತಿಯಿಂದ ಪೀಠಾರೋಹಣ ಕಾರ್ಯಕ್ರಮದ ಜ್ಯೋತಿಯನ್ನು ಕರ್ಮಯೋಗಿ ಪರಮ ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮೀಜಿಯವರು ಪ್ರಜ್ವಲಿಸಿದರು. ಪೀಠಾರೋಹಣಕ್ಕೂ ಮುನ್ನ ಮಾತನಾಡಿದ ಗಂಗಾಮಾತಾಜಿಯವರು ಬಸವಕಲ್ಯಾಣದ ಜನತೆಯನ್ನು ಕೊಂಡಾಡಿದರು. ಪೂಜ್ಯ ಸಿದ್ಧರಾಮೇಶ್ವರ ಸ್ವಾಮೀಜಿಯವರ ಕಾರ್ಯದಕ್ಷತೆ ಮತ್ತು ಸೇವೆಯನ್ನು ಕೊಂಡಾಡಿದರು. ಶೂನ್ಯ ಪೀಠದ ಮೇಲೆ ಮೊದಲಿಗೆ ವ್ಯೋಮಕಾಯಸಿದ್ಧ ಅಲ್ಲಮ ಪ್ರಭುದೇವರ ಭಾವಚಿತ್ರವನ್ನಿರಿಸಿ ಪೂಜೆ ಸಲ್ಲಿಸಿ ಗೌರವಿಸಲಾಯಿತು. ನಂತರ ಬಸವಧರ್ಮ ಪೀಠದ ಪ್ರಥಮ ಮಹಾಜಗದ್ಗುರು ಲಿಂಗೈಕ್ಯ ಲಿಂಗಾನಂದ ಅಪ್ಪಾಜಿಯವರ ಪುತ್ಥಳಿಯನ್ನಿರಿಸಿ ಪುಷ್ಪವೃಷ್ಟಿ ಮಾಡಿ ಭಕ್ತಿ-ಗೌರವಗಳನ್ನು ಸಲ್ಲಿಸಲಾಯಿತು. ಇದಾದ ನಂತರ ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿಯವರು ಮಾತಾಜಿಯವರನ್ನು ಪೀಠದ ಮೇಲೆ ಆಸೀನರಾಗಿಸಿ ಅವರ ಪಾದ ಪೂಜೆಯನ್ನು ಮಾಡಿ ಆಶೀರ್ವಾದ ಪಡೆದರು. ನಂತರ ಹರ್ಷೋದ್ಗಾರಗಳ ನಡುವೆ ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮೀಜಿಯವರು ಪೀಠಾರೋಹಣ ಮಾಡಿ 12ನೇ ಶತಮಾನದ ದಿವ್ಯತೆಯನ್ನು ನೆನಪಿಗೆ ತಂದರು. ಪೂಜ್ಯರಿಗೆ ಮಾತಾಜಿಯವರು ರುದ್ರಾಕ್ಷಿ ಮುಕುಟವನ್ನು ತೊಡಿಸಿ ವಿಭೂತಿ ಧರಿಸಿ ಅನುಗ್ರಹಿಸಿದರು. ಬಸವಧರ್ಮ ಪೀಠದ ಪೂಜ್ಯರು ಹಾಗು ಶರಣರು ಸ್ವಾಮೀಜಿಯವರ ಪಾದ ಪೂಜೆ ಮಾಡಿ ಪುಷ್ಪವೃಷ್ಟಿಗೈದು ಆರತಿ ಬೆಳಗಿ ಆನಂದಿಸಿದರು. ಅನೇಕ ಜನ ಶರಣ ಶರಣೆಯರು ಪೂಜ್ಯ ಸ್ವಾಮೀಜಿಯವರಿಗೆ ಮಾಲಾರ್ಪಣೆ ಮಾಡಿ ಕಾಣಿಕೆಯನ್ನು ನೀಡಿ ತಮ್ಮ ಭಕ್ತಿ ಸಮರ್ಪಣೆ ಮಾಡಿದರು. ಇದೇ ಸಂದರ್ಭದಲ್ಲಿ ಪೂಜ್ಯ ಸ್ವಾಮೀಜಿಯವರ ತಾಯಿ ಚಳ್ಳಕೆರೆಯ ಶರಣೆ ರತ್ನಮ್ಮನವರನ್ನು ಸತ್ಕರಿಸಲಾಯಿತು.

ಪೀಠಾರೋಹಣದ ನಂತರ ಶರಣರ ಭಕ್ತಿಗೌರವಗಳನ್ನು ಸ್ವೀಕರಿಸಿದ ಸ್ವಾಮೀಜಿಯವರು ಈ ರೀತಿಯಾಗಿ ಸಂದೇಶವನ್ನು ನೀಡಿದರು

ಬಸವೇಶನೆ, ಬಸವರಾಜನೆ,
ಬಸವಣ್ಣನೆ, ಬಸವ ತಂದೆಯೆ,
ಬಸವ ಕೃಪಾನಿಧಿ ಬಸವ ಪರಮೇಶ್ವರೀಶ್ವರ
ಬಸವ ಪ್ರಮಥಾದಿದೇವ ರಕ್ಷಿಸು ಬಸವಾ॥

ಧರ್ಮಗುರುಗಳು ತಾವು ಜೀವಂತವಾಗಿರುವಾಗಲೇ ಉತ್ತರಾಧಿಕಾರಿಯನ್ನು ಆಯ್ಕೆಮಾಡುವ ಪ್ರಕ್ರಿಯೆ ಕೇವಲ ಬೌದ್ಧ ಧರ್ಮ ಮತ್ತು ಲಿಂಗಾಯತ ಧರ್ಮಗಳಲ್ಲಿದೆ. ಅಂದು ಗುರು ಬಸವಣ್ಣನವರು ಶೂನ್ಯ ಪೀಠವನ್ನು ಸ್ಥಾಪಿಸಿ ಅದಕ್ಕೆ ಗುರುವಾಗಲು ತಮ್ಮಲ್ಲಿ ಎಲ್ಲಾ ಅರ್ಹತೆಗಳಿದ್ದರೂ ಅಲ್ಲಮಪ್ರಭುದೇವರನ್ನು ಗುರುವನ್ನಾಗಿ ಮಾಡಿ ವಿರಕ್ತ ಪರಂಪರೆಗೆ ನಾಂದಿ ಹಾಡಿದರು. ನಾವು ಶರಣರ ಆಶೋತ್ತರಗಳನ್ನು ನೆರವೇರಿಸಲು ಬಂದವರು. ನಾವು ಮಾಡುವ ಸೇವೆಯಲ್ಲಿ ಭೇದ ಭಾವ ಎಣಿಸದೆ ಸೇವೆ ಮಾಡಬೇಕು. ಅನೇಕರು ಸ್ವಾಮೀಜಿ ತಾವು ಜಗದ್ಗುರುಗಳಾಗಿ, ಟ್ರ್ಯಾಕ್ಟರ್ ಓಡಿಸುವುದು ಜಮೀನಿನಲ್ಲಿ ಕೆಲಸಮಾಡುವುದು ಮಾಡಬಾರದು ಬೇರೆಯವರಿಂದ ಮಾಡಿಸಬೇಕು ಎಂದು ಹೇಳುತ್ತಾರೆ. ಆದರೆ ನಾನು ತನುವಿನಿಂದ ಸೇವೆ ಮಾಡುವವರೆಗೆ ನನಗೆ ಸಮಾಧಾನವಿರುವುದಿಲ್ಲ ಎಂದು ಹೇಳಿ ತಮ್ಮ ಸರಳತೆಯನ್ನು ಬಿಚ್ಚಿಟ್ಟರು. ಮಾತಾಜಿ ಅಪ್ಪಾಜಿಯವರು ನನಗೆ ಯಾವತ್ತೂ ಉಪದೇಶ-ಆದೇಶ ಮಾಡಿಲ್ಲ ಆದರೆ ಅವರ ಪ್ರತಿಯೊಂದು ನಡೆನುಡಿಯೂ ನನಗೆ ಉಪದೇಶ ಆದೇಶವಾಗಿದೆ ಎಂದು ನಾನು ಭಾವಿಸಿದ್ದೇನೆ. ಅವರಿಂದಲೇ ಸೇವೆ ಮಾಡುವುದನ್ನು ನಾನು ಕಲಿತುಕೊಂಡಿದ್ದೇನೆ ಎಂದರು.

ತಮ್ಮನ್ನು ಈ ಮಟ್ಟಕ್ಕೆ ಬೆಳೆಸಿದ ಅಪ್ಪಾಜಿ-ಮಾತಾಜಿ ಮತ್ತು ಗಂಗಾಮಾತಾಜಿಯವರನ್ನು ಕೊಂಡಾಡುತ್ತ ಭಕ್ತಿಗೌರವಗಳನ್ನು ಸಲ್ಲಿಸಿದ ಶರಣರಿಗೆ ಹಾರೈಸುತ್ತ ತಮ್ಮ ಪೀಠಾರೋಹಣ ಸಂದೇಶವನ್ನು ಮುಗಿಸಿದರು.

13ನೇ ಕಲ್ಯಾಣ ಪರ್ವಕ್ಕೆ ಜಯವಾಗಲಿ, 28ನೇ ಶರಣಮೇಳಕ್ಕೆ ಜಯವಾಗಲಿ ಎನ್ನುವ ಹರ್ಷೋದ್ಗಾರಗಳ ನಡುವೆ ಮಹಾಮಂಗಳದೊಂದಿಗೆ 13ನೇ ಕಲ್ಯಾಣ ಪರ್ವದ ಸಮಾರೋಪವಾಯಿತು.

3 ದಿನಗಳ ಕಾಲ ಕಲ್ಯಾಣದ ತುಂಬ ಎಲ್ಲಿ ನೋಡಿದರೂ ಶರಣರೇ, ಕಾರ್ಯಕ್ರಮದ ಬಿಡುವಿನ ವೇಳೆಯಲ್ಲಿ ಬಸವ ಕಲ್ಯಾಣದ ಅನೇಕ ಧಾರ್ಮಿಕ, ಮತ್ತು ಐತಿಹಾಸಿಕ ಸ್ಥಳಗಳಾದ, ಗುರು ಬಸವಣ್ಣನವರು ಇಷ್ಟಲಿಂಗಾರ್ಚನೆ/ತಪಸ್ಸು ಮಾಡುತ್ತಿದ್ದ ಅರಿವಿನ ಮನೆ, ಅಕ್ಕನಾಗಲಾಂಬಿಕೆ ಗವಿ, ಚೆನ್ನಬಸವಣ್ಣನ ಗವಿ, ಅಲ್ಲಮಪ್ರಭುದೇವರ ಮಠ, ಬಂದವರ ಓಣಿಯಲ್ಲಿರುವ ಅಕ್ಕಮಹಾದೇವಿ ಗವಿ, ಪರುಷ ಕಟ್ಟೆ, ಬಸವೇಶ್ವರ ದೇವಸ್ಥಾನ, ಮಡಿವಾಳ ಮಾಚೀದೇವರ ಹೊಂಡ, ತ್ರಿಪುರಾಂತಕ ಕೆರೆ, ಚಾಲುಕ್ಯರ ಬಿಜ್ಜಳರಾಜನ ಪುರಾತನ ಕೋಟೆ ಮತ್ತು ಗುರು ಬಸವಣ್ಣನವರ 108 ಅಡಿ ಮೂರ್ತಿಯ ಆವರಣದಲ್ಲಿರುವ ಗವಿಗಳು, ಶರಣಗ್ರಾಮಗಳನ್ನು ನೋಡಿ ಹರ್ಷ ಪಟ್ಟು 28ನೇ ಶರಣಮೇಳದಲ್ಲಿ ಮತ್ತೆ ಸೇರೋಣ ಶರಣು ಶರಣಾರ್ಥಿ ಎನ್ನುವ ನುಡಿಗಳೊಡನೆ ಶರಣ ಶರಣೆಯರು ಮಕ್ಕಳು ತಮ್ಮ ತಮ್ಮ ಊರುಗಳತ್ತ ಹರ್ಷಭರಿತರಾಗಿ ಸಾಗಿದರು.

“ಸದ್ಧರ್ಮವಾದ ಲಿಂಗಾಯತ ಧರ್ಮ ಕುರಿತು ಮೀನಾಮೇಷ ಏಕೆ?

ಶರಣ-ಶಿವಶಂಕರ ಬಾಗೇವಾಡಿ
ರಾ.ಬ.ದಳ, ನಿಡುಸೋಸಿ ರೋಡ ಸಂಕೇಶ್ವರ

ವಿಶ್ವಗುರು ಬಸವಣ್ಣನವರು ನವ ಮನ್ವಂತರ ಪುರುಷ. ಜಾತಿ, ವರ್ಗ, ವರ್ಣ ರಹಿತವಾದ ಸಮತಾ ಸಮಾಜ ಕಟ್ಟ ಬಯಸಿದ ಮಹಾಮಾನವತಾವಾದಿ. ಗುರುಬಸವಣ್ಣವರು ಕರ್ಮಸಿದ್ಧಾಂತದ ಪುಣ್ಯ-ಪಾಪಗಳನ್ನು ಸೂತಕಪಾತಕ ಭಾವಗಳನ್ನು ತಿರಸ್ಕರಿಸಿ ಮಾನವರನ್ನು ಪರಿಶುದ್ಧತೆಯ ಕಡೆಗೆ ಒಯ್ಯುವಂಥ ಲಿಂಗಾಯತ ಧರ್ಮವನ್ನು ಸ್ಥಾಪಿಸಿದರು. ಇಷ್ಟಲಿಂಗ ದೀಕ್ಷೆಯನ್ನು ಅನುಷ್ಠಾನಗೊಳಿಸಿ ಜಾತ್ಯತೀತ ಶರಣ ಸಮಾಜ ಕಟ್ಟಿ ಅಜರಾಮರವಾಗಿ ಬೆಳಗಿಸಿದರು.

ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯಾ
ಇವನಮ್ಮವ ಇವನಮ್ಮವ ಇವನಮ್ಮವ ಎಂದೆನಿಸಯ್ಯಾ
ಲಿಂಗದೇವಾ, ನಿಮ್ಮ ಮಹಾಮನೆಯ ಮಗನೆಂದೆನಿಸಯ್ಯಾ

ಎಂದು ಮಾನವರೆಲ್ಲರೂ ಒಂದಾಗುವ ರಾಜಮಾರ್ಗವನ್ನೆ ತೋರಿಸಿಕೊಟ್ಟರು ಅಂತೆಯೇ ಅಂದು ಲಕ್ಷಾಂತರ ಜನರು ಲಿಂಗದೀಕ್ಷೆ ಪಡೆದು ತಮ್ಮ ಪೂರ್ವಕರ್ಮಗಳನ್ನು ಕಿತ್ತೊಗೆದು ಶರಣ ಸಮಾಜದಲ್ಲಿ ಒಂದಾದರು. ಸತ್ಯ ಶುದ್ಧ ಕಾಯಕ ಮಾಡುತ್ತ ಕಾಯಕದಲ್ಲಿಯೇ ಕೈಲಾಸ ಕಂಡು ನಂಬಿ ಬಾಳಿ ಬದುಕಿದರು.

ಇಂದು ಬಹುಪಾಲು ಲಿಂಗಾಯತರು ಧರ್ಮದ ತಿಳುವಳಿಕೆಯ ಕೊರತೆಯಿಂದ ನಾಲಿಗೆ ಮೇಲೆ (ಗುರು ಬಸವಣ್ಣನವರ) ಜಾತ್ಯತೀತ ಭಾವನೆಯನ್ನು ಹೇಳುತ್ತ, ಮೆದುಳಿನಲ್ಲಿ (ಮನುವಿನ) ಜಾತಿವಾದವನ್ನು ಇಟ್ಟುಕೊಂಡು ದ್ವಂದ್ವ ಸ್ಥಿತಿಯಲ್ಲಿದ್ದಾರೆ ಇದರಿಂದ ಲಿಂಗಾಯತ ಧರ್ಮ ಸ್ವತಂತ್ರ ಧರ್ಮವಾಗಿ ಹೊರಹೊಮ್ಮಲು ವಿಳಂಬವಾಗುತ್ತಿದೆ.

ಕರುಣಿ ಬಸವಾ, ಕಾಲಹರ ಬಸವಾ
ಕರ್ಮಹರ ಬಸವಾ, ನಿರ್ಮಳ ಬಸವಾ,
ಶಿವಜ್ಞಾನಿ ಬಸವಾ, ನಿಮ್ಮ ಧರ್ಮವಯ್ಯಾ
ಈ ಭಕ್ತಿಯ ಪಥವು. ಕರುಣಿ ಕಪಿಲಸಿದ್ಧ ಮಲ್ಲಿನಾಥಯ್ಯಾ
ನಿಮಗೂ ಎನಗೂ ಬಸವಣ್ಣನ ಧರ್ಮವಯ್ಯಾ

ಎಂದು ಸಿದ್ಧರಾಮರು ಹೇಳುವಲ್ಲಿ ಗುರುಬಸವಣ್ಣನವರೇ ಸಮಾನತೆ ಸಾರುವ ಲಿಂಗಾಯತ ಧರ್ಮ ಸ್ಥಾಪಕರು ಎಂಬುದನ್ನು ನಾವು ಮನಗಾಣುತ್ತೇವೆ.

ಗುರುಬಸವಣ್ಣನವರು ದೇಹವನ್ನೇ ದೇವಾಲಯವನ್ನಾಗಿ ಮಾಡಿಕೊಳ್ಳುವ ಕುರಿತು ದಾರಿ ತೋರಿದ್ದಾರೆ. ಆದ್ದರಿಂದ ಲಿಂಗಾಯತ ಧರ್ಮದಲ್ಲಿ ಗುಡಿಗಳು, ಮಂದಿರಗಳು ಮೂರ್ತಿ ಪೂಜೆ ನಿಷಿದ್ಧ. ವ್ಯರ್ಥಯಜ್ಞಯಾಗಗಳಿಲ್ಲ ಶೋಷಣೆ ಇಲ್ಲ, ಅಸಮಾನತೆ ಇಲ್ಲ, ಪಾಪಿಯೂ ಕೂಡ, ಹೊಸ ಮನುಷ್ಯನಾಗುವ ಅವಕಾಶ ಒದಗಿಸಿದೆ. ಇಷ್ಟಲಿಂಗದ ಪೂಜೆಯ ಮೂಲಕ ಏಕದೇವೋಪಾಸನೆ ಏಕಮಾನವಕುಲ, ಜ್ಞಾನ ಮತ್ತು ಕ್ರಿಯೆ ಪ್ರತಿಪಾದಿಸುತ್ತವೆ.

ಹೀಗಾಗಿ ಇದು ರಾಷ್ಟ್ರಧರ್ಮವು ಹೌದು ವಿಶ್ವಧರ್ಮವು ಹೌದು. ಸಕಲ ಜೀವಾತ್ಮರ ಲೇಸನ್ನು ಬಯಸುತ್ತ ಕಾಯಕತತ್ವದಿಂದ ಕ್ರಿಯಾಶೀಲವಾಗುವುದಕ್ಕೆ ಸ್ಫೂರ್ತಿ ನೀಡುವ ಧರ್ಮವಾಗಿದೆ.

ಇಂದಿನ ಭಾರತದ ಮತ್ತು ವಿಶ್ವದ ರಾಜ್ಯಾಡಳಿತವು ಬಸವತತ್ವದ ಮೇಲೆ ನಡೆದದ್ದೆ ಆದರೆ ಸಮಾಜದಲ್ಲಿ ಬಡತನ ಅಸ್ಪೃಶ್ಯತೆ, ಜಾತಿಗಳು ಮಾಯವಾಗುತ್ತವೆ. ಅಖಂಡವಾದ, ದಿವ್ಯವಾದ, ಬಲಾಢ್ಯವಾದ ಶರಣ ಸಮಾಜ ನಿರ್ಮಾಣವಾಗುತ್ತದೆ. ಅಂತಹ ದಿನಗಳ ಕನಸು ಕಾಣಬೇಕಿದೆ. ಜಗತ್ತಿನಲ್ಲಿ ಅಸಾಧ್ಯವಾದುದು ಯಾವುದೂ ಇಲ್ಲ. ಎಲ್ಲರ ಚಿಂತನೆಗಳು - ಸಾಧನೆಗಳು ಮೇಳವಿಸಬೇಕಿದೆಯಷ್ಟೆ!

ಇಂದಿನ ಕೆಳವರ್ಗದ ಬಗ್ಗೆ ಹಿತಾಸಕ್ತಿಯುಳ್ಳವರು, ಸಮಾಜ ಸುಧಾರಕರು, ಬುದ್ಧಿಜೀವಿಗಳು, ಸಾಹಿತಿಗಳು, ನಿಸ್ವಾರ್ಥ ರಾಜಕಾರಣಿಗಳು ಮಠಾಧಿಪತಿಗಳು ಮುಂದೆ ಬಂದು ಚಿಂತನೆಗೈದು ಕ್ರಿಯಾತ್ಮಕ ನಿರ್ಧಾರ ಕೈಕೊಂಡಲ್ಲಿ ಹೊಸ ಸಮಾಜದೆಡೆಗೆ ಸಾಗಲು ಸಾಧ್ಯವಾಗುವುದು.

ನಾಡಿನ ಸಮಸ್ತ ಮಠಾಧೀಶರು ಇಂದು ಜಾಗೃತರಾಗಿ ಮುಂದೆ ಬಂದು ಸಮಾಜದ ಮುಂಚೂಣಿಯಲ್ಲಿ ನಿಂತು ಮಠಗಳನ್ನು ಮಹಾಮನೆಗಳಾಗಿಯೂ, ಇಷ್ಟಲಿಂಗ ಯೋಗದ ಅರಿವಿನ ಮನೆಗಳಾಗಿಯೂ, ವಚನಾನುಭವದ ಅನುಭವ ಮಂಟಪಗಳಾಗಿಯೂ ಸಮಾಜದ ಸಮಸ್ತ ಶರಣರು ಒಂದಾಗಿ ಪ್ರಸಾದ ಸೇವಿಸುವ ದಾಸೋಹ ಮನೆಗಳಾಗಿಯೂ ಬಸವ ಮಂಟಪಗಳಾಗಿ ಪರಿವರ್ತಿಸಿ ಪರುಷಕಟ್ಟೆ ನಿರ್ಮಿಸಿ ಧರ್ಮಗುರು ಬಸವಣ್ಣನವರ ಭಾವಚಿತ್ರ ವಚನಗ್ರಂಥವನ್ನಿಟ್ಟು ನಿತ್ಯ ವಚನಪಠಣ ಕಾರ್ಯಗಳು ಮತ್ತು ಸಾಮೂಹಿಕ ಪ್ರಾರ್ಥನೆ ವಿಧಾನ ಜಾರಿಗೆ ಬರುವಂತಾಗಲು ಚರ ಜಂಗಮರಾಗಿ ಕಾರ್ಯ ಮಾಡಬೇಕು.

ಗುರುಬಸವಣ್ಣನವರ ವಚನತತ್ವಗಳು ವಿಶ್ವಮಾನ್ಯ ತತ್ವಗಳಾಗಿರುವಾಗ ಹಿಂಜರಿಕೆ ಏಕೆ? ಸತ್ಯವನ್ನು ಸ್ವೀಕರಿಸಿ ಹೊರ ಹೊಮ್ಮಿಸಲು ಮೀನಾಮೇಷ ಏಕೆ? ಮಾನವೀಯ ಅಂತಃಕರಣದ ಲಿಂಗಾಯತ ಧರ್ಮವು ಸ್ವತಂತ್ರ ಧರ್ಮವಾಗಲು ಎಲ್ಲರೂ ಪಣ ತೊಡಬೇಕು ಆದ್ದರಿಂದ ಬಸವಾಭಿಮಾನಿಗಳು ವಚನತತ್ವಗಳಿಗೆ ಹೆಚ್ಚಿನ ಪ್ರಚಾರ ಕೊಟ್ಟು ವಿಶ್ವಮಾನ್ಯವಾದ ನಮ್ಮ ಲಿಂಗಾಯತ ಧರ್ಮ ಸ್ವತಂತ್ರ ಧರ್ಮ ಎಂಬುದನ್ನು ಸಾರಲೇಬೇಕಾಗಿದೆ.

ಲಿಂಗಾಯತ ಎಂಬುದು ಜಾತಿಸೂಚಕ ಪದವಾಗಲಾರದು. ಅದು ವಿಶ್ವವ್ಯಾಪಕ ಪದ(ಲಿಂಗದೀಕ್ಷೆ ಪಡೆದಾತನು ನಿತ್ಯ ಅನುಷ್ಠಾನ ಮಾಡಿಕೊಂಡು ಲಿಂಗವನ್ನು ಆಯತ-ಸ್ವಾಯತ-ಸನ್ನಿಹಿತ ಮಾಡಿಕೊಂಡಾತನೆ “ಲಿಂಗಾಯತ” ಎಂಬುದನ್ನು ಅರಿತುಕೊಳ್ಳಬೇಕು. ಆಗ ಅವರು ನಿಜ ಶರಣರಾಗಿ ಮಾನವೀಯ ಅಂತಃಕರಣವುಳ್ಳವರಾಗಿರುತ್ತಾರೆ.)

ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ(ಶರಣ) ಹಿರಿಯರಿಲ್ಲ ಎಂದು ಗುರು ಬಸವಣ್ಣನವರು ಎಲ್ಲರನ್ನು ಶಿವಸ್ವರೂಪಿಗಳಾಗಿ ಕಂಡಿದ್ದಾರೆ. ಆದ್ದರಿಂದ ಯಾರೇ ಆಗಿರಲಿ ತಮ್ಮ ಸಣ್ಣತನವನ್ನು ತೆಗೆದುಹಾಕಿ ನಿರ್ಭಯವಾಗಿ ಲಿಂಗಾಯತ ಧರ್ಮವನ್ನು ಜಾರಿಗೊಳಿಸಿ ಸೇವೆ ಮಾಡುತ್ತ ಶರಣರ ಹೃದಯದಲ್ಲಿ ರಾರಾಜಿಸುವುದು ಮೇಲು. ಅದು ತ್ಯಾಗಾಂಗ, ಭೋಗಾಂಗ, ಯೋಗಾಂಗ ಪ್ರತೀಕವಾದ ಶೂನ್ಯ ಪೀಠ. ಎಲ್ಲರೂ ಒಂದುಗೂಡಿ ಶಾಂತಿಧ್ವನಿ ಮೊಳಗಿಸುವಂತಾಗಲಿ. 21ನೇ ಶತಮಾನವು ಬಸವಧರ್ಮದ ಯುಗವಾಗಲು ಶ್ರಮಿಸೋಣ ಬನ್ನಿ.

"ಬಸವ ಧರ್ಮ ಪೀಠವು" ಈ ನಿಟ್ಟಿನಲ್ಲಿ ಮುಂಚೂಣಿಯಲ್ಲಿದ್ದು ಪ್ರಪ್ರಥಮವಾಗಿ ಮಹಿಳಾ ಜಗದ್ಗುರು ಡಾ॥ ಮಾತೆ ಮಹಾದೇವಿಯವರು ಗುರು ಬಸವಣ್ಣನವರು ಸ್ಥಾಪಿಸಿದ "ಲಿಂಗಾಯತ" ಧರ್ಮವನ್ನು ಪರಿಚಯಿಸಲು ಪಸರಿಸಲು ದೇಶ- ವಿದೇಶಗಳಲ್ಲಿ ಸಂಚರಿಸಿ ಪ್ರಚಾರ ಕಾರ್ಯ ಮಾಡುತ್ತಿದ್ದಾರೆ. ಬಸವಾಭಿಮಾನಿಗಳ ಸಂಖ್ಯೆಯನ್ನು ಹೆಚ್ಚಿಸಿದ್ದಾರೆ. ಆ ದಿಶೆಯಲ್ಲಿ "ರಾಷ್ಟ್ರೀಯ ಬಸವ ದಳ" ಸಂಘಟನೆ ಮಾಡಿ ರಾಜ್ಯ ಮಟ್ಟದಲ್ಲಿ , ರಾಷ್ಟ್ರಮಟ್ಟದಲ್ಲಿ ಎಲ್ಲರ ಸಹಕಾರದೊಂದಿಗೆ ಸಮಾವೇಶ ಹಮ್ಮಿಕೊಂಡು ಶಾಂತಿ ಧ್ವನಿ ಮೊಳಗಿಸಿ ಸರ್ಕಾರಗಳ ಗಮನ ಸೆಳೆದಿದ್ದಾರೆ.

ಆದ್ದರಿಂದ ಲಿಂಗಾಯತರು-ಲಿಂಗಾಯತೇತರರು ಒಂದಾಗಿ ಸಮತಾಭಾವದ ಮಹಾಮಾನವತಾವಾದಿ ಬಸವಣ್ಣನವರೇ ನಮ್ಮ "ಧರ್ಮಗುರು"ವೆಂದು ವಚನ ಸಂಹಿತೆಯೇ ಧರ್ಮಗ್ರಂಥವೆಂದು ಲಿಂಗಾಯತರ ದೇವರು "ಲಿಂಗದೇವ" ರೆಂದು ಘಂಟಾಘೋಷವಾಗಿ ಇಂದಿನ ಸಮಸ್ತ ವಿರಕ್ತ ಮಠಾಧೀಶರು , ಜಂಗಮರು, ಗುರುಗಳು ದುಡಿಮೆಗಾರರ – ಕೆಳವರ್ಗದ ಹಿತಾಸಕ್ತರು ಸಾರಿ ಸಾರಿ ಹೇಳಬೇಕು.ಇಂದು ಲಿಂಗಾಯತ ಮಗುವನ್ನೆ ಕರೆದು – ನಿಮ್ಮ ಧರ್ಮ ಯಾವುದು? ಧರ್ಮಗುರು ಯಾರು? ಧರ್ಮಗ್ರಂಥ ಯಾವುದು?ಎಂದರೆ ನಿರುತ್ತರ ಕೊಡುತ್ತಾನೆ. ಎಲ್ಲರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಧರ್ಮ ಸಂಸ್ಥಾಪನೆಯಲ್ಲಿ ತೊಡಗಬೇಕು. ಸಮಾಜ ಕಟ್ಟುವ ಕೆಲಸ ಮಾಡಬೇಕು. ಜಂಗಮಧಾರಿಗಳಾಗಿ ಸಮಾಜದ ಛಿದ್ರೀಕರಣ ತಡೆಯದೆ ಹೋದರೆ ಹೊಣೆ ಯಾರು? ಎಂದು ಚಿಂತನೆ ಮಾಡಬೇಕಾದ ಸಮಯವಿದು.

ಬಸವ ಪೀಠವು ಎದ್ದು ಒಸೆದು ನಾಣ್ಯವು ಹುಟ್ಟಿ
ಬಸವನ ಮುದ್ರೆ ಮೆರೆದಾವು । ಧರೆಯವಗೆ
ವಶವಾಗದಿಹುದೆ? ಸರ್ವಜ್ಞ

ಕಾಲಜ್ಞಾನಿ ಸರ್ವಜ್ಞನೇ ಬಸವ ಧರ್ಮದ ಮಹತ್ವ ಅಮರತತ್ವವನ್ನು ಸಾರಿದ್ದಾರೆ. ನಾವು ಅರಿತುಕೊಂಡು ಧರ್ಮವನ್ನು ಸ್ಥಾಪಿಸಿ -ಬೆಳೆಸಿ-ವ್ಯಾಪಕಗೊಳಿಸಿ ಬಸವಕಿರಣಗಳಾಗಿ ಬಾಳೋಣ ಬನ್ನಿ

"ಬಸವ ಗುರುವಿನ ತತ್ತ್ವ ಲೋಕದಿ ಹಬ್ಬಲಿ
ಮನುಜ ಕಲ್ಪಿತ ಜಾತಿ ಹೆರೆತೊಲಗಿ ಹೋಗಲಿ
ವಿಶ್ವಮಾನವ ಪ್ರೀತಿ ಹೊನಲಾಗಿ ಹರಿಯಲಿ
ಸೃಷ್ಟಿಕರ್ತನ ಕರುಣೆ ಎಮ್ಮ ಕಾಪಾಡಲಿ"
ಗುರುಬಸವ ಸ್ಥಾಪಿತ –"ಲಿಂಗಾಯತ ಧರ್ಮಕ್ಕೆ ಜಯವಾಗಲಿ"
ವಿಶ್ವಮಾನವ ಕುಲಕ್ಕೆ ಲೇಸಾಗಲಿ
ಜೈ ಗುರು ಬಸವೇಶ ಹರಹರ ಮಹಾದೇವ

****

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ 2015 ರ ಜನವರಿ 11, 12, 13, 14, 15ರಂದು ನಡೆಯಲಿರುವ ಇಪ್ಪತ್ತೆಂಟನೆಯ ಶರಣಮೇಳದ ಅಂಗವಾಗಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ

ಪ್ರಚಾರ ಪ್ರವಾಸ ಕಾರ್ಯಕ್ರಮ

ವಿ.ಸೂ : ಕಾರಣಾಂತರದಿಂದ ದಿನಾಂಕಗಳಲ್ಲಿ ಊರುಗಳಲ್ಲಿ ಬದಲಾವಣೆ ಆಗಬಹುದು. ಅದನ್ನು ತಿಳಿಸಲಾಗುವುದು.ಸ್ಥಳೀಯ ಕಾರಣದಿಂದ ಬದಲಾವಣೆ ಬೇಕಾಗಿದರೆ ತಕ್ಷಣವೇ ತಿಳಿಸಿರಿ. ಸಂಪರ್ಕಿಸುವ ದೂರವಾಣಿ: ಪೂಜ್ಯ ಶ್ರೀ ಸದ್ಗುರು ಮಾತೆ ಬಸವರತ್ನಾದೇವಿ –9481741795

ಕ್ರ.ಸಂ.	ದಿನಾಂಕ	ವಾರ	ಊರಿನ ಹೆಸರು
21.	21-11-2014	ಮಾತೃ(ಶುಕ್ರ)ವಾರ	ಶಿರಗುಪ್ಪ
22 .	22-11-2014	ಶರಣ(ಶನಿ)ವಾರ	ಆಸ್ಕಿಹಾಳ
23.	23-11-2014	ದೇವ(ಭಾನು)ವಾರ	ಗಂಗಾವತಿ
24.	24-11-2014	ಶಿವ (ಸೋಮ)ವಾರ	ಕೊಪ್ಪಳ
25.	25-11-2014	ಬಸವ (ಮಂಗಳ)ವಾರ	ಕೊಪ್ಪಳ
26.	26-11-2014	ಚನ್ನ(ಬುಧ)ವಾರ	ಕೊಪ್ಪಳ
27.	27-11-2014	ಪ್ರಭು(ಗುರು)ವಾರ	ಹುಬ್ಬಳ್ಳಿ
28.	28-11-2014	ಮಾತೃ(ಶುಕ್ರ)ವಾರ	ಧಾರವಾಡ
29.	29-11-2014	ಶರಣ (ಶನಿ)ವಾರ	ಮುಮ್ಮಿಗಟ್ಟಿ
30.	30-11-2014	ದೇವ(ಭಾನು)ವಾರ	ಆಳ್ನಾವರ
31.	01-12-2014	ಶಿವ (ಸೋಮ)ವಾರ	ಆಳ್ನಾವರ
32.	02-12-2014	ಬಸವ(ಮಂಗಳ)ವಾರ	ಆಳ್ನಾವರ
33.	03-12-2014	ಚನ್ನ(ಬುಧ)ವಾರ	ಆಳ್ನಾವರ
34.	04-12-2014	ಪ್ರಭು (ಗುರು)ವಾರ	ಆಳ್ನಾವರ
35.	05-12-2014	ಮಾತೃ (ಶುಕ್ರ)ವಾರ	ಸವದತ್ತಿ
36.	06-12-2014	ಶರಣ(ಶನಿ)ವಾರ	ಬೈಲಹೊಂಗಲ
37.	07-12-2014	ದೇವ(ರವಿ)ವಾರ	ಬೈಲಹೊಂಗಲ
38.	08-12-2014	ಶಿವ(ಸೋಮ)ವಾರ	ಬೆಳಗಾವಿ
39.	09-12-2014	ಬಸವ (ಮಂಗಳ)ವಾರ	ಬೆಳಗಾವಿ
40.	10-12-2014	ಚನ್ನ(ಬುಧ)ವಾರ	ಸಂಕೇಶ್ವರ

41.	11-12-2014	ಪ್ರಭು(ಗುರು)ವಾರ	ಗಡಿಹಿಂಗ್ಲಾಜ್
42.	12-12-2014	ಮಾತೃ(ಶುಕ್ರ)ವಾರ	ಗೋಕಾಕ್
43.	13-12-2014	ಶರಣ(ಶನಿ)ವಾರ	ಗೋಕಾಕ್
44.	14-12-2014	ದೇವ(ಭಾನು)ವಾರ	ಗೋಕಾಕ್
45.	15-12-2014	ಶಿವ(ಸೋಮ)ವಾರ	ಗೋಕಾಕ್
46.	16-12-2014	ಬಸವ(ಮಂಗಳ)ವಾರ	ಶೇಗುಣಸಿ
47.	17-12-2014	ಚನ್ನ(ಬುಧ)ವಾರ	ಖವಟಕೊಪ್ಪ
48.	18-12-2014	ಪ್ರಭು(ಗುರು)ವಾರ	ತಾಂವಶಿ
49.	19-12-2014	ಮಾತೃ(ಶುಕ್ರ)ವಾರ	ಅಥಣಿ
50.	20-12-2014	ಶರಣ(ಶನಿ)ವಾರ	ಕನಮಡಿ
51.	21-12-2014	ದೇವ(ಭಾನು)ವಾರ	ಚಡಚಣ
52.	22-12-2014	ಶಿವ (ಸೋಮ)ವಾರ	ಬಿಜಾಪುರ
53.	23-12-2014	ಬಸವ(ಮಂಗಳ)ವಾರ	ಗುಲಬರ್ಗಾ (ಬ.ಮಂಟಪ ನೃಪತುಂಗ ಕಾಲನಿ ಸಂಜೆ-6)
54.	24-12-2014	ಚನ್ನ(ಬುಧ)ವಾರ	ಗುಲಬರ್ಗಾ(ಮಹಾಂತನಗರ)
55.	25-12-2014	ಪ್ರಭು(ಗುರು)ವಾರ	ಯಲಮಾಮಿಡಿ
56.	26-12-2014	ಮಾತೃ(ಶುಕ್ರ)ವಾರ	ಬಸವಕಲ್ಯಾಣ
57.	27-12-2014	ಶರಣ(ಶನಿ)ವಾರ	ಬಸವಕಲ್ಯಾಣ
58.	28-12-2014	ದೇವ(ಭಾನು)ವಾರ	ಉದಗೀರ
59.	29-12-2014	ಶಿವ(ಸೋಮ)ವಾರ	ಕಮಲಾನಗರ
60.	30-12-2014	ಬಸವ(ಮಂಗಳ)ವಾರ	ಬೀದರ
61.	31-12-2014	ಚನ್ನ(ಬುಧ)ವಾರ	ಜಹಿರಾಬಾದ್
62.	01-01-2015	ಪ್ರಭು(ಗುರು)ವಾರ	ಹೈದ್ರಾಬಾದ್
63.	02-01-2015	ಮಾತೃ(ಶುಕ್ರ)ವಾರ	ಹೈದ್ರಾಬಾದ್
64.	03-01-2015	ಶರಣ(ಶನಿ)ವಾರ	ಹೈದ್ರಾಬಾದ್
65.	04-01-2015	ದೇವ(ಭಾನು)ವಾರ	ಹೈದ್ರಾಬಾದ್
66.	05-01-2015	ಶಿವ(ಸೋಮ)ವಾರ	ಹೈದ್ರಾಬಾದ್
67.	06-01-2015	ಬಸವ(ಮಂಗಳ)ವಾರ	ಹೈದ್ರಾಬಾದ್
68.	07-01-2015	ಚನ್ನ(ಬುಧ)ವಾರ	ಹೈದ್ರಾಬಾದ್
69.	08-01-2015	ಪ್ರಭು(ಗುರು)ವಾರ	ಹೈದ್ರಾಬಾದ್
70.	09-01-2015	ಮಾತೃ(ಶುಕ್ರ)ವಾರ	ಹೈದ್ರಾಬಾದ್
71.	10-01-2015	ಶರಣ(ಶನಿ)ವಾರ	ಕೂಡಲ ಸಂಗಮಕ್ಕೆ ಪ್ರಯಾಣ


ಸನ್ಮಾನ್ಯ ಸಚಿವ ಶ್ರೀ ಎಚ್. ಆಂಜನೇಯವರಿಗೆ ಗೌರವ ಸನ್ಮಾನ


ಶರಣ ಜ್ಯೋತಿಪ್ರಕಾಶ್ ಮಿರ್ಜಿ ಮತ್ತು ಶರಣ ನಾಗೇಂದ್ರಪ್ಪನವರಿಗೆ ಗೌರವ ಸನ್ಮಾನ

ಮಂಡ್ಯದಲ್ಲಿ ಶರಣ ಮೇಳ ಪ್ರಚಾರ ಕಾರ್ಯಕ್ರಮ



ಆಯೋಜಕರು: ಎಂ. ಗುರುಪ್ರಸಾದ ವಕೀಲರು ಹಾಗೂ ಗಣ್ಯಮಾನ್ಯರು

Printed to post without pre-payment, RNI No.19988/70, REGISTEERD/KA/BGW-50/2012-2014, WPP(W)-[illegible]17R
Posted at GPO Bangalore on 3rd,10th,20th of every month



ಸನ್ಮಾನ್ಯ ಸಚಿವ ಶ್ರೀ ಎಚ್. ಆಂಜನೇಯವರಿಂದ ಕಲ್ಯಾಣ ಪರ್ವದ ಉದ್ಘಾಟನೆ



ಕಲ್ಯಾಣ ಪರ್ವದ ವೇದಿಕೆ



ಮಹಾಮನೆಯಿಂದ ಬಸವ ಜ್ಯೋತಿಯೊಂದಿಗೆ ಮೆರವಣಿಗೆ